2019 ಕ.ತೀ.ವ 1044

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬೂದಿಹಾಳ್ ಆರ್.ಬಿ.
## ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ.ಎ. ಪಾಟೀಲ್

ಸಂತೋಷ ಮತ್ತು ಇತರರು –ವಿರುದ್ಧ– ಕರ್ನಾಟಕ ರಾಜ್ಯ,
ಮದ್ದೂರು ಪೋಲೀಸ್ ಠಾಣೆ *

ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 374(2)ನೇ ಪ್ರಕರಣದ ಮೇರೆಗಿನ ಕ್ರಿಮಿನಲ್ ಅಪೀಲು.

ಈ ಅಪೀಲಿನಲ್ಲಿ ಅಪೀಲುದಾರರು IIನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮಂಡ್ಯ ಇವರು ಹೊರಡಿಸಿದ ದಿನಾಂಕ: 24.6.2013ರ ತೀರ್ಪು ಮತ್ತು ಅಪರಾಧ ನಿರ್ಣಯದ ಆದೇಶ ಹಾಗೂ ಶಿಕ್ಷೆಯನ್ನು ಪ್ರಶ್ನಿಸಿ 1ರಿಂದ 5ರವರೆಗಿನ ಆಪಾದಿತರು, ಈ ಪ್ರಸ್ತುತ ಅಪೀಲನ್ನು ಸಲ್ಲಿಸಿದ್ದಾರೆ.

ಅಪೀಲುದಾರರ ಪ್ರಕಾರ, ಪ್ರಾಸಿಕ್ಯೂಷನ್‌ರವರು ಒದಗಿಸಿದ ಸಾಕ್ಷ್ಯ ಮತ್ತು ದಾಖಲೆಗಳಲ್ಲಿ ಅಸಂಗತತೆ ಇದ್ದು, ಅವರು ಅಪರಾಧದ ಉದ್ದೇಶವನ್ನು ಸಾಬೀತುಪಡಿಸುವಲ್ಲಿ ವಿಫಲರಾಗಿದ್ದಾರೆ. ವಿಚಾರಣಾ ನ್ಯಾಯಾಲಯವು, ಅವುಗಳನ್ನು ಪರಿಶೀಲಿಸಿ ಅಪರಾಧವನ್ನು ನಿರ್ಣಯಿಸುವಲ್ಲಿ ತಪ್ಪೆಸಗಿದ್ದು, ಅದು ಹೊರಡಿಸಿದ ತೀರ್ಪು ಮತ್ತು ಆದೇಶವನ್ನು ತಳ್ಳಿಹಾಕುವ ಮೂಲಕ ಅಪೀಲಿಗೆ ಅವಕಾಶ ನೀಡಬೇಕೆಂಬುದು ಅವರ ನಿವೇದನೆಯಾಗಿದೆ.

ಒದಗಿಸಿದ ಸಾಕ್ಷ್ಯ ಮತ್ತು ದಾಖಲೆಗಳಲ್ಲಿ ಹೇಳಿಕೊಳ್ಳುವಂತಹ ವ್ಯತ್ಯಾಸಗಳಿಲ್ಲವೆಂದು, ಪ್ರತ್ಯಕ್ಷ ಸಾಕ್ಷಿದಾರರು ಇದ್ದಾಗ, ಅಪರಾಧದ ಉದ್ದೇಶ ಮುಖ್ಯವಾಗುವುದಿಲ್ಲವೆಂಬುದು ಸಾಬೀತಾದ ಕಾನೂನಿನ ತತ್ವವೆಂದು, ವಿಚಾರಣಾ ನ್ಯಾಯಾಲಯ ಅಪರಾಧವನ್ನು

*ಕ್ರಿಮಿನಲ್ ಅಪೀಲು ಸಂಖ್ಯೆ: 905/2013, ದಿನಾಂಕ 22ನೇ ಜೂನ್, 2018.

ಸರಿಯಾಗಿಯೇ ನಿರ್ಣಯಿಸಿ, ಶಿಕ್ಷೆಯನ್ನು ವಿಧಿಸಿದೆ ಎಂದು ಪ್ರಾಸಿಕ್ಯೂಷನ್‌ರವರು ನಿವೇದಿಸಿಕೊಂಡಿದ್ದಾರೆ.

ಎರಡೂ ಕಡೆಯವರ ವಾದಗಳನ್ನು ಆಲಿಸಿದ ಈ ನ್ಯಾಯಾಲಯವು, ಪ್ರತ್ಯಕ್ಷ ಸಾಕ್ಷಿದಾರರ ಸಾಕ್ಷ್ಯದೊಂದಿಗೆ ಸುಸಂಗತವಾಗಿರುವ ದಾಖಲೆಯಲ್ಲಿನ ಎಲ್ಲಾ ಸಾಕ್ಷ್ಯವನ್ನು ಪರಿಗಣಿಸಿದ ನಂತರ, ವಿಚಾರಣಾ ನ್ಯಾಯಾಲಯವು ಸರಿಯಾದ ನಿರ್ಣಯಕ್ಕೆ ಬಂದು, ಇದರಲ್ಲಿನ ಆಪಾದಿತ–ಅಪೀಲುದಾರರ ಅಪರಾಧವನ್ನು ಸರಿಯಾಗಿಯೇ ನಿರ್ಣಯಿಸಿದೆ; ದಾಖಲೆಯಲ್ಲಿನ ಎಲ್ಲಾ ಸಾಕ್ಷ್ಯದ ಗುಣಾರ್ಹತೆಗಳನ್ನು ಮರು–ವಿವೇಚಿಸಿದ ನಂತರವೂ, ಇದು, ಆಪಾದಿತರಿಗೆ ಪ್ರಯೋಜನ ನೀಡುವಂತಾಗಲು ಮತ್ತೊಂದು ಅಭಿಪ್ರಾಯದ ಯುಕ್ತ ಸಾಧ್ಯತೆ ಇರುವ ಮೊಕದ್ದಮೆಯಾಗಿರುವುದಿಲ್ಲ; ಪ್ರಶ್ನಿತ ತೀರ್ಪು ಮತ್ತು ಆದೇಶವು ವಿಪರ್ಯಯವಾದುದಾಗಿದೆ ಮತ್ತು ಕಾನೂನಿಗೆ ಅನುಸಾರವಾಗಿಲ್ಲ ಎಂದು ಹೇಳುವಂಥ ಯಾವುವೇ ಸರಿಯಾದ ಕಾರಣಗಳನ್ನು ಇದರಲ್ಲಿನ ಆಪಾದಿತ–ಅಪೀಲುದಾರರು ಸಾಬೀತುಪಡಿಸಿರುವುದಿಲ್ಲವೆಂದು ಅಭಿಪ್ರಾಯಪಟ್ಟಿದೆ. ಆದ್ದರಿಂದ, ಈ ಅಪೀಲು ಗುಣಾರ್ಹತೆಗಳಿಲ್ಲದ ಅಪೀಲಾಗಿದ್ದು, ವಜಾಗೊಳ್ಳಲು ಅರ್ಹವಾಗಿದೆ ಮತ್ತು ತದನುಸಾರವಾಗಿ ಅದನ್ನು ವಜಾಗೊಳಿಸಲಾಗಿದೆ ಎಂದು ನಿರ್ಣಯಿಸಿದೆ.

ಅಪೀಲು ವಜಾಗೊಂಡಿದೆ.

*ಉಲ್ಲೇಖಿಸಲಾದ ಮೊಕದ್ದಮೆಗಳು* *ಪ್ಯಾರಾಗಳಲ್ಲಿ*

1. *(2017) 13 ಎಸ್‌ಸಿಸಿ 585*
   *ಚಂದ್ರಶೇಖರ್ ಮತ್ತು ಇನ್ನೊಬ್ಬರು –ವಿರುದ್ಧ– ರಾಜ್ಯ* *(ಉಲ್ಲೇ) 10*
2. *(2013) 14 ಎಸ್‌ಸಿಸಿ 581*
   *ಮೊಹಮ್ಮದ್ ಇಷಾಕ್ ಮತ್ತು ಇತರರು –ವಿರುದ್ಧ–*
   *ಪಶ್ಚಿಮ ಬಂಗಾಳ ರಾಜ್ಯ ಮತ್ತು ಇತರರು* *(ಉಲ್ಲೇ) 11*

*ಅರ್ಜಿದಾರರ ಪರ : ಶ್ರೀ ಬಿ.ಸಿ. ರಾಜಣ್ಣ, ನ್ಯಾಯವಾದಿ.*
*ಪ್ರತ್ಯರ್ಜಿದಾರರ ಪರ : ಶ್ರೀ ವಿಜಯಕುಮಾರ್ ಮಜಗೆ, ಹೆಚ್ಚುವರಿ ಎಸ್‌ಪಿಪಿ*

**ತೀರ್ಪು**

**ನ್ಯಾಯಮೂರ್ತಿ ಶ್ರೀ ಬಿ.ಎ. ಪಾಟೀಲ್:**

ಎಸ್.ಸಿ. ಸಂಖ್ಯೆ: 135/2005, 49/2007 ಮತ್ತು 189/2008 ಇವುಗಳೊಂದಿಗೆ ಎಸ್.ಸಿ. ಸಂಖ್ಯೆ: 205/2002ರಲ್ಲಿ, IIನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮಂಡ್ಯ ಇವರು ಹೊರಡಿಸಿದ ದಿನಾಂಕ: 24.6.2013ರ ತೀರ್ಪು ಮತ್ತು ಅಪರಾಧ ನಿರ್ಣಯದ ಆದೇಶ ಹಾಗೂ ಶಿಕ್ಷೆಯನ್ನು ಪ್ರಶ್ನಿಸಿ, 1ರಿಂದ 5ರವರೆಗಿನ ಆಪಾದಿತರು ಈ ಪ್ರಸ್ತುತ ಅಪೀಲನ್ನು ಸಲ್ಲಿಸಿದ್ದಾರೆ.

2. ಪ್ರಾಸಿಕ್ಯೂಷನ್‌ರವರ ವಾದದ ಒಟ್ಟಾರೆ ಸಾರಾಂಶ ಹೀಗಿದೆ – ದೂರುದಾರನಾದ ಕಾಮರಾಜು ಈತನು, ಮಂಚಯ್ಯ ಮತ್ತು ಲಕ್ಕಯ್ಯ ಇವರ ನಡುವೆ ವಲಗೇರೆಹಳ್ಳಿ ಗ್ರಾಮದ ನಿವೇಶನ ಸಂಖ್ಯೆ: 26ಕ್ಕೆ ಸಂಬಂಧಿಸಿದಂತೆ ವಿವಾದವಿತ್ತೆಂದು ಹಾಗೂ ಸದರಿ ವಿವಾದಕ್ಕೆ ಸಂಬಂಧಿಸಿದ ಎರಡು ಗುಂಪುಗಳಿವೆ; ಆಪಾದಿತರು ಲಕ್ಕಯ್ಯನನ್ನು ಬೆಂಬಲಿಸುತ್ತಿದ್ದರೆ, ದೂರುದಾರ ಮತ್ತು ಗಾಯಗೊಂಡ ಸಿಡಬ್ಲ್ಯುಎಸ್. 1ರಿಂದ 5 ಇವರು ಮಂಚಯ್ಯನನ್ನು ಬೆಂಬಲಿಸಿದ್ದಾರೆ. ಸದರಿ ಎರಡು ಗುಂಪುಗಳ ನಡುವೆ ವೈರತ್ವವಿದ್ದು, ಈ ಹಿನ್ನಲೆಯಲ್ಲಿ, ದಿನಾಂಕ: 12.6.2002ರಂದು ಸುಮಾರು ರಾತ್ರಿ 10.00 ಗಂಟೆಗೆ, ದೂರುದಾರನು ಚುಂಚಮ್ಮ ಎಂಬಾಕೆಯ ಮನೆಯ ಮುಂದೆ ಕಮಲಮ್ಮ ಎಂಬಾಕೆಯೊಂದಿಗೆ ಮಾತನಾಡುತ್ತಿದ್ದಾಗ, ಆಪಾದಿತ ವ್ಯಕ್ತಿಗಳು, ಅವರ ಸಾಮಾನ್ಯ ಉದ್ದೇಶದ ಮುಂದುವರಿಕೆಯಾಗಿ ಕಾನೂನುಬಾಹಿರ ಕೂಟ ರಚಿಸಿಕೊಂಡು, ಮಾರಕ ಆಯುಧಗಳನ್ನು ಕೈಯಲ್ಲಿ ಹಿಡಿದುಕೊಂಡು ಬಂದರು ಮತ್ತು ದೂರುದಾರನಿಗೆ ಮತ್ತು ಆತನ ಪತ್ನಿಗೆ ಕೆಟ್ಟ ಮಾತುಗಳಿಂದ ಬಯ್ದರು; ಆಪಾದಿತ ಸಂಖ್ಯೆ: 6–ಶಿವಾನಂದ ಈತನು, ಕಾಮರಾಜುವನ್ನು

ಮುಗಿಸುವುದಾಗಿ, ಒಬ್ಬನನ್ನು ಕೊಂದರೂ ಒಂದೇ ಮೊಕದ್ದಮೆ ಹಲವು ವ್ಯಕ್ತಿಗಳನ್ನು ಕೊಂದರೂ ಒಂದೇ ಮೊಕದ್ದಮೆ ಎಂದು ಹೇಳಿದನು ಮತ್ತು ಆಪಾದಿತ ಸಂಖ್ಯೆ: 1 ಈತನನ್ನು ಪ್ರಚೋದಿಸಿದನು; ಆಪಾದಿತ ಸಂಖ್ಯೆ: 1 ಈತನು, ಕಾಮರಾಜುವನ್ನು ಕೊಲ್ಲುವ ಉದ್ದೇಶದೊಂದಿಗೆ ಆತನ ತಲೆಯ ಮೇಲೆ ಮಚ್ಚಿನಿಂದ ಹಲ್ಲೆ ಮಾಡಿದನು ಮತ್ತು ತತ್ಪರಿಣಾಮವಾಗಿ, ಕಾಮರಾಜುವಿಗೆ ತೀವ್ರ ಗಾಯಗಳುಂಟಾದವು; ಆಪಾದಿತ ಸಂಖ್ಯೆ: 2–ಸತೀಶ ಈತನು, ದೂರುದಾರ ಕಾಮರಾಜುವಿನ ಬಲಗೈ ಮೇಲೆ ಚಾಕುವಿನಿಂದ ಹಲ್ಲೆ ಮಾಡಿ ಗಾಯಗಳನ್ನುಂಟು ಮಾಡಿದನು; ಆಪಾದಿತ ಸಂಖ್ಯೆ: 3 ಮತ್ತು 4 ಇವರು, ದೂರುದಾರನು ಕೆಳಗೆ ಬಿದ್ದಾಗ, ಅವನ ಮೇಲೆ ಹಲ್ಲೆ ಮಾಡಿದರು, ಹತ್ತಿರದಲ್ಲೇ ನಿಂತಿದ್ದ ಕಮಲಮ್ಮ ಈ ಆರೋಪಿ ವ್ಯಕ್ತಿಗಳನ್ನು ಪ್ರಶ್ನಿಸಿದಾಗ, ಅದಕ್ಕಾಗಿ ಆಪಾದಿತ ಸಂಖ್ಯೆ: 1 ಈತನು ಮಚ್ಚಿನಿಂದ ಆಕೆಯ ತಲೆ ಮೇಲೆ ಹಲ್ಲೆ ಮಾಡಿದನು ಹಾಗೂ ಆಪಾದಿತ ಸಂಖ್ಯೆ: 3 ಮತ್ತು 4 ಇವರು ಅವಳ ಬೆನ್ನಿನ ಮೇಲೆ ಮತ್ತು ಹೊಟ್ಟೆಯ ಎಡ ಭಾಗದ ಮೇಲೆ ಹಲ್ಲೆ ಮಾಡಿದರು; ಈ ಗಲಾಟೆಯನ್ನು ಕೇಳಿ, ದೂರುದಾರನ ಸಹೋದರ ರಾಜು ಅಲ್ಲಿಗೆ ಬಂದು, ಆರೋಪಿಯನ್ನು ಪ್ರಶ್ನಿಸಿದಾಗ, ಆತನನ್ನು ಕೊಲ್ಲುವ ಸಲುವಾಗಿ, ಆಪಾದಿತ ಸಂಖ್ಯೆ: 1 ಈತನು, ರಾಜುವಿನ ತಲೆಯ ಮೇಲೆ ಮಚ್ಚಿನಿಂದ ಹಲ್ಲೆ ಮಾಡಿ, ಆತನ ಎಡ ಕಣ್ಣಿನ ಮೇಲೆ ಆತನಿಗೆ ಗಂಭೀರ ಗಾಯಗಳನ್ನುಂಟು ಮಾಡಿದನು ಮತ್ತು ಆ ಸಮಯದಲ್ಲಿ ಸಿಡಬ್ಲ್ಯುಗಳಾದ 3 ಮತ್ತು 5 ಇವರು ಬಂದು ಜಗಳವನ್ನು ಬಿಡಿಸಿದರು; ಆ ತರುವಾಯ, ಆಪಾದಿತ ಸಂಖ್ಯೆ: 5 ಈತನು, ಆಪಾದಿತ ಸಂಖ್ಯೆ: 3 ಈತನಿಂದ ದೊಣ್ಣೆಯನ್ನು ಕಸಿದುಕೊಂಡು ಸಿಡಬ್ಲ್ಯು 3–ನಿರ್ಮಲಾ ಈಕೆಯ ಎಡ ಮೊಳಕೈ ಮೇಲೆ ಹಲ್ಲೆ ಮಾಡಿದನು ಹಾಗೂ ಆಪಾದಿತ ಸಂಖ್ಯೆ: 1 ಈತನು, ಸಿಡಬ್ಲ್ಯು.4–ಭಾನುಪ್ರಕಾಶ್, ತಾಯಿ: ನಿರ್ಮಲಾ ಈತನ ತಲೆಗೆ ಹೊಡೆದನು; ಆಪಾದಿತ ಸಂಖ್ಯೆ: 2 ಈತನು ಸಹ ಚಾಕುವಿನಿಂದ ಭಾನುಪ್ರಕಾಶ್ ಮೇಲೆ ಹಲ್ಲೆ ಮಾಡಲು ಪ್ರಯತ್ನಿಸಿದನು, ಆಗ ಆತನು ತಪ್ಪಿಸಿಕೊಳ್ಳಲು ಪ್ರಯತ್ನಿಸಿದಾಗ, ಆತನ ಹೊಟ್ಟೆಯ ಎಡ ಭಾಗಕ್ಕೆ ಗಾಯವುಂಟಾಯಿತು ಹಾಗೂ ಆ ಸಮಯದಲ್ಲಿ, ಆಪಾದಿತ ಸಂಖ್ಯೆ: 2 ಈತನು,

ಕಲ್ಲನ್ನು ಎತ್ತಿಕೊಂಡು ಸಿಡಬ್ಲ್ಯು 5 ಈತನ ಎಡ ಕಣ್ಣಿನ ಮೇಲೆ ಹಲ್ಲೆ ಮಾಡಿದನು; ಆ ಸಮಯದಲ್ಲಿ ಅಲ್ಲೇ ಇದ್ದ ಆಪಾದಿತ ಸಂಖ್ಯೆ 7 ಈತನು, ಪ್ರಶ್ನೆಯಲ್ಲಿರುವ ವಿವಾದದ ಸಂಬಂಧದಲ್ಲಿ ಅವರು ಮಂಚಯ್ಯನಿಗೆ ಬೆಂಬಲ ನೀಡಿದರೆ, ಭಯಂಕರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ಹೆದರಿಸಿದನು; ಈ ಗಲಾಟೆಯಲ್ಲಿ ಗಾಯಗಳುಂಟಾದ ದೂರುದಾರನ ಸಹೋದರನಾಗಿರುವ ರಾಜುವನ್ನು ಚಿಕಿತ್ಸೆಗಾಗಿ ನಿಮ್ಹಾನ್ಸ್ ಆಸ್ಪತ್ರೆಗೆ ವರ್ಗಾಯಿಸಲಾಯಿತು ಮತ್ತು ತರುವಾಯ ದಿನಾಂಕ: 16.07.2002ರಂದು ಸುಮಾರು ಮಧ್ಯಾಹ್ನ 2.00 ಗಂಟೆಗೆ, ಆತನಿಗುಂಟಾದ ಗಾಯಗಳಿಂದಾಗಿ ಆತನು ಮರಣ ಹೊಂದಿದನು ಎಂದು ಆರೋಪಿಸಿ, ದೂರುದಾರನಾದ ಕಾಮರಾಜು ಈತನು ನಿಶಾನೆ.ಪಿ1ರ ಪ್ರಕಾರ ಹೇಳಿಕೆಯನ್ನು ನೀಡಿದ್ದಾನೆ. ದೂರುದಾರನು ಆಸ್ಪತ್ರೆಯಲ್ಲಿದ್ದಾಗ, ಆತನಿಂದ ಈ ಹೇಳಿಕೆಯನ್ನು ನಿಶಾನೆ–ಪಿ1ರ ಪ್ರಕಾರ ದಾಖಲಿಸಿಕೊಳ್ಳಲಾಯಿತು ಮತ್ತು ಅಪರಾಧ ಸಂಖ್ಯೆ: 294/2002ರಲ್ಲಿ ಪ್ರಕರಣವನ್ನು ದಾಖಲಿಸಲಾಯಿತು. ತನಿಖೆ ಪೂರ್ಣಗೊಂಡ ನಂತರ, ತನಿಖಾಧಿಕಾರಿಗಳು, ಆಪಾದಿತ ವ್ಯಕ್ತಿಗಳ ವಿರುದ್ಧ ಆರೋಪ ಪಟ್ಟಿಯನ್ನು ದಾಖಲಿಸಿದರು.

3. ಆರೋಪ ಪಟ್ಟಿಯನ್ನು ದಾಖಲಿಸಿದ ನಂತರ, ಆಪಾದಿತ ಸಂಖ್ಯೆ: 1ರಿಂದ 3 ಇವರು ತಲೆಮರೆಸಿಕೊಂಡರು ಮತ್ತು ಆಪಾದಿತ ಸಂಖ್ಯೆ: 4ರಿಂದ 7 ಇವರ ವಿರುದ್ಧವಿದ್ದಂತೆ ಪ್ರತ್ಯೇಕ ಪ್ರಕರಣವನ್ನು ಸತ್ರ ನ್ಯಾಯಾಲಯಕ್ಕೆ ಒಪ್ಪಿಸಲಾಯಿತು. ತರುವಾಯ, ಆಪಾದಿತ ಸಂಖ್ಯೆ: 1ರಿಂದ 3 ಇವರನ್ನು ಬಂಧಿಸಿ ಅವರ ಪ್ರಕರಣವನ್ನು ಪ್ರತ್ಯೇಕವಾಗಿ ಒಪ್ಪಿಸಲಾಯಿತು ಮತ್ತು ಈ ಹಿನ್ನಲೆಯಲ್ಲಿ, ಈ ನಾಲ್ಕು ಪ್ರಕರಣಗಳನ್ನು ಪ್ರತ್ಯೇಕವಾಗಿ ನೋಂದಾಯಿಸಲಾಗಿದೆ ಹಾಗೂ ಸತ್ರ ನ್ಯಾಯಾಧೀಶರು ವಿಚಾರಣೆ ನಡೆಸಿದ್ದಾರೆ. ಮಾನ್ಯ ಸತ್ರ ನ್ಯಾಯಾಧೀಶರು, ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಂಡ ನಂತರ ಮತ್ತು ಪಕ್ಷಕಾರರ ಪರ ನ್ಯಾಯವಾದಿಗಳ ವಾದಗಳನ್ನು ಆಲಿಸಿದ ನಂತರ, ಆರೋಪವನ್ನು ರೂಪಿಸಿರುವರು. ಆಪಾದಿತ ವ್ಯಕ್ತಿಗಳು ತಾವು ಅಪರಾಧಿಗಳಲ್ಲವೆಂದು ವಾದಿಸಿ, ನಿಗದಿಪಡಿಸಿದಂತೆ ವಿಚಾರಣೆಯನ್ನು ನಡೆಸಬೇಕೆಂದು ಕ್ಲೇಮು ಮಾಡಿದರು.

4. ತಮ್ಮ ಮೊಕದ್ದಮೆಯನ್ನು ಸಾಬೀತುಪಡಿಸುವಲ್ಲಿ ಪ್ರಾಸಿಕ್ಯೂಷನ್ ಇವರು, ಎಸ್.ಸಿ. ಸಂಖ್ಯೆ: 205/2002ರಲ್ಲಿ 28 ಸಾಕ್ಷಿದಾರರನ್ನು ಪ್ರಾಸಾ.1ರಿಂದ 28 ಆಗಿ ಮತ್ತು ನಿಶಾನೆ–ಪಿ.1ರಿಂದ ಪಿ.33ರವರೆಗಿನ ದಸ್ತಾವೇಜುಗಳನ್ನು; ಎಸ್.ಸಿ. ಸಂಖ್ಯೆ: 49/2007ರಲ್ಲಿ ಪ್ರಾ.ಸಾ.1ರಿಂದ 26ರವರೆಗಿನ ಸಾಕ್ಷಿದಾರರನ್ನು ಮತ್ತು ನಿಶಾನೆ ಪಿ.1ರಿಂದ 21ರವರೆಗಿನ ದಸ್ತಾವೇಜುಗಳನ್ನು; ಎಸ್‌ಸಿ ಸಂಖ್ಯೆ: 189/ 2008ರಲ್ಲಿ 21 ಸಾಕ್ಷಿದಾರರನ್ನು (ಪ್ರಾ.ಸಾ. 1ರಿಂದ 21) ಮತ್ತು ನಿಶಾನೆ–ಪಿ1ರಿಂದ ಪಿ26ರವರೆಗಿನ ದಸ್ತಾವೇಜುಗಳನ್ನು; ಎಸ್.ಸಿ. ಸಂಖ್ಯೆ: 135/2005ರಲ್ಲಿ 7 ಸಾಕ್ಷಿದಾರರನ್ನು (ಪ್ರಾಸಾ.1ರಿಂದ 7) ಮತ್ತು ನಿಶಾನೆ–ಪಿ1ರಿಂದ ಪಿ3 ದಸ್ತಾವೇಜುಗಳನ್ನು ಪರೀಕ್ಷಿಸಿದರು ಮತ್ತು ಗುರುತಿಸಿದರು. ಪ್ರಾಸಿಕ್ಯೂಷನ್‌ರವರು ಮುದ್ದೆಮಾಲು ಸಂಖ್ಯೆ: 1ರಿಂದ 12 ಇವುಗಳನ್ನು ಸಹ ಗುರುತಿಸಿದರು. ಪಾಟಿ–ಸವಾಲಿನ ಕಾಲಾವಧಿಯಲ್ಲಿ, ಆಪಾದನೆಗಳನ್ನು ನಿಶಾನೆ–ಪ್ರ1ರಿಂದ ಪ್ರ.4 ಆಗಿ ಗುರುತಿಸಲಾಯಿತು. ಆ ತರುವಾಯ, ಆಪಾದಿತರ ಹೇಳಿಕೆಯನ್ನು ಅವರ ವಿರುದ್ಧ ಅಪರಾಧದಲ್ಲಿ ಸಿಕ್ಕಿಸುವ ಸಾಕ್ಷ್ಯವನ್ನು ಮುಂದಿಟ್ಟು, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದ ಅಡಿಯಲ್ಲಿ ದಾಖಲಿಸಲಾಯಿತು, ಅದನ್ನು ಅವರು ಅಲ್ಲಗಳೆದರು. ಆದಾಗ್ಯೂ, ಅವರು ಯಾವುದೇ ಸಾಕ್ಷ್ಯವನ್ನು ಮಂಡಿಸಿರುವುದಿಲ್ಲ. ಆದರೆ, ಎಸ್.ಸಿ. ಸಂಖ್ಯೆ: 189/2008ರಲ್ಲಿನ ಆಪಾದಿತ ಸಂಖ್ಯೆ: 2 ಈತನು, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದ ಅಡಿಯಲ್ಲಿ ದಾಖಲಿಸಿದ ತನ್ನ ಹೇಳಿಕೆಯೊಂದಿಗೆ ಲಿಖಿತ ಹೇಳಿಕೆಯೊಂದನ್ನು ಸಲ್ಲಿಸಿದ್ದಾನೆ. ಪಕ್ಷಕಾರರ ವಾದಗಳನ್ನು ಆಲಿಸಿದ ನಂತರ, ವಿಚಾರಣಾ ನ್ಯಾಯಾಯಲವು, ಭಾರತ ದಂಡ ಸಂಹಿತೆಯ 149ನೇ ಪ್ರಕರಣದೊಂದಿಗೆ ಓದಲಾದ 143, 148, 324, 307, 302 ಈ ಪ್ರಕರಣಗಳ ಅಡಿಯಲ್ಲಿ ದಂಡನೀಯವಾದ ಅಪರಾಧಗಳಿಗಾಗಿ ಸಂಖ್ಯೆ: 1ರಿಂದ 5ರವರೆಗಿನ ಆಪಾದಿತರ ಅಪರಾಧವನ್ನು ನಿರ್ಣಯಿಸಿ, ಪ್ರಶ್ನಿತ ತೀರ್ಪು ಮತ್ತು ಅಪರಾಧ ನಿರ್ಣಯದ ಆದೇಶವನ್ನು ಹೊರಡಿಸಿದೆ ಮತ್ತು ಶಿಕ್ಷೆಯನ್ನು ವಿಧಿಸಿದೆ. ಆದಾಗ್ಯೂ, ಸಂಖ್ಯೆ: 6 ಮತ್ತು 7ರವರೆಗಿನ ಆಪಾದಿತರ ಮೇಲೆ ಹೊರಿಸಿದ ಅಪರಾಧಗಳಿಂದ ಅವರು ಖುಲಾಸೆಗೊಂಡಿದ್ದಾರೆ. ಅವರ ಅಪರಾಧ ನಿರ್ಣಯ ಮತ್ತು ಶಿಕ್ಷೆಯಿಂದ ಬಾಧಿತರಾಗಿ, ಸಂಖ್ಯೆ: 1ರಿಂದ 5ರವರೆಗಿನ ಆಪಾದಿತರು ಈ ಅರ್ಜಿಯನ್ನು ಸಲ್ಲಿಸಿದ್ದಾರೆ.

5. ಆಪಾದಿತರ ಪರ ಹಾಜರಾದ ಮಾನ್ಯ ನ್ಯಾಯವಾದಿ ಶ್ರೀ ರಾಜಣ್ಣ ಬಿ.ಸಿ. ಇವರ ವಾದಕ್ಕೆ ಮುಖ್ಯ ಕಾರಣಗಳೆಂದರೆ, ನ್ಯಾಯಾಲಯದ ಮುಂದೆ ಪರೀಕ್ಷಿಸಲಾದ ಸಾಕ್ಷಿದಾರರು ಸಂಬಂಧಿಗಳಾಗಿದ್ದಾರೆ ಮತ್ತು ಹಿತಾಸಕ್ತ ಸಾಕ್ಷಿದಾರರಾಗಿದ್ದಾರೆ; ಸ್ವತಂತ್ರ ಸಾಕ್ಷಿದಾರರು ಲಭ್ಯವಿದ್ದಾಗ್ಯೂ, ಅವರ ಹೇಳಿಕೆಗಳನ್ನು ತನಿಖಾ ಏಜನ್ಸಿಯು ದಾಖಲಿಸಿಲ್ಲ; ಘಟನೆ ನಡೆದ ಸ್ಥಳ ಕಾಮರಾಜುವಿನ ಮನೆಯ ಮುಂಭಾಗವೆಂದು ಹೇಳಲಾಗಿದೆ, ಆದರೆ, ಬರೆಯಲಾದ ಪಂಚನಾಮೆಯಲ್ಲಿ, ಅದು ಚುಂಚಮ್ಮಳ ಮನೆಯ ಮುಂದೆ ಎಂದಿದೆ; ಆದ್ದರಿಂದ, ನಿಶಾನೆ–ಪಿ3ಯಲ್ಲಿನ ಸ್ಥಳ ಮಹಜರಿನಲ್ಲಿ ಮತ್ತು ನ್ಯಾಯಾಲಯದ ಮುಂದೆ ಮಂಡಿಸಿದ ಸಾಕ್ಷ್ಯದಲ್ಲಿ ವೈರುಧ್ಯವಿದೆ; ಅಂಥ ಸಾಕ್ಷ್ಯ ಲಭ್ಯವಿದ್ದಾಗ್ಯೂ, ವಿಚಾರಣಾ ನ್ಯಾಯಾಲಯವು, ಅವುಗಳನ್ನು ಸೂಕ್ತವಾಗಿ ಪರಿಗಣಿಸಿರುವುದಿಲ್ಲ ಮತ್ತು ಅವುಗಳ ಗುಣಾರ್ಹತೆಗಳನ್ನು ವಿವೇಚಿಸಿರುವುದಿಲ್ಲ ಹಾಗೂ ಇದರಲ್ಲಿನ ಆಪಾದಿತ–ಅಪೀಲುದಾರರ ಅಪರಾಧವನ್ನು ತಪ್ಪಾಗಿ ನಿರ್ಣಯಿಸಲಾಗಿದೆ; ಪ್ರಾಸಾ.10, ಮೃತ ರಾಜುವಿನ ಪತ್ನಿಯು ಘಟನೆಯ ಪ್ರತ್ಯಕ್ಷ ಸಾಕ್ಷಿಯಾಗಿದ್ದು, ಆರೋಪಿಸಿದ ಘಟನೆಯು ಮಧ್ಯರಾತ್ರಿ 12.00 ಗಂಟೆ ಅಥವಾ ಬೆಳಿಗ್ಗೆ 1.00 ಗಂಟೆಯ ಸುಮಾರಿಗೆ ನಡೆದಿದೆ ಮತ್ತು ಪೂರ್ಣಗೊಂಡಿದೆ ಎಂದು ಸಾಕ್ಷ್ಯ ನೀಡಿದ್ದಾಳೆ; ಆ ತರುವಾಯ, ಅವರು ಆಸ್ಪತ್ರೆಗೆ ಸುಮಾರು ಬೆಳಿಗ್ಗೆ 2.00 ಗಂಟೆಗೆ ಹೋಗಿದ್ದಾರೆ ಮತ್ತು ಆಕೆಯು ಬೆಳಿಗ್ಗೆ 4.00 ಗಂಟೆಯಷ್ಟು ಹೊತ್ತಿಗೆ ಆಸ್ಪತ್ರೆಯಲ್ಲಿದ್ದರು; ಆದರೆ, ದೂರನ್ನು ಸದರಿ ದಿನಾಂಕಗಳು ಮತ್ತು ಸಮಯಕ್ಕೆ ಮೊದಲು ನೋಂದಾಯಿಸಲಾಗಿದೆ; ಆರೋಪಿಸಲಾದ ಘಟನೆಯು, ದಿನಾಂಕ: 12.06.2002ರಂದು ರಾತ್ರಿ ಸುಮಾರು 10.00 ಗಂಟೆಗೆ ನಡೆದಿದೆ ಎಂದು ದೂರುದಾರ–ಪ್ರಾಸಾ.1 ಈತನ ಹೇಳಿಕೆಯಾಗಿದೆ ಮತ್ತು ನಿಶಾನೆ–ಪಿ1 ದೂರನ್ನು ರಾತ್ರಿ ಸುಮಾರು 12.35 ಗಂಟೆಗೆ, ಪ್ರಾಸಾ.1 ಈತನ ಹೇಳಿಕೆಯನ್ನು ದಾಖಲಿಸುವ ಮೂಲಕ ನೋಂದಾಯಿಸಲಾಗಿತ್ತು. ಈ ಹಿನ್ನಲೆಯಲ್ಲಿ, ಹೇಳಿಕೆಗಳಲ್ಲಿ ಮತ್ತು ಪ್ರಾಸಿಕ್ಯೂಷನ್ ಮಂಡಿಸಿದ ಸಾಕ್ಷ್ಯದಲ್ಲಿ ಅಸಂಗತತೆ ಇದೆ; ಆರೋಪಿಯ ಅಪರಾಧವನ್ನು ಸಾಬೀತುಪಡಿಸುವಲ್ಲಿ ಪ್ರಾಸಿಕ್ಯೂಷನ್ ಸಂಪೂರ್ಣವಾಗಿ ವಿಫಲವಾಗಿದ್ದಾಗ್ಯೂ, ವಿಚಾರಣಾ ನ್ಯಾಯಾಲಯವು, ಇದರಲ್ಲಿನ ಆಪಾದಿತ–ಅಪೀಲುದಾರರ ಅಪರಾಧವನ್ನು ತಪ್ಪಾಗಿ ನಿರ್ಣಯಿಸಿದೆ ಎಂಬುದು ಅವರ

ನಿವೇದನೆಯಾಗಿದೆ. ಇದಲ್ಲದೆ ಅವರು, ನ್ಯಾಯಾಲಯದ ಮುಂದೆ ಹಾಜರುಪಡಿಸಿದ ವೈದ್ಯಕೀಯ ದಾಖಲೆಗಳು, ಗಾಯಾಳುವನ್ನು ಆಸ್ಪತ್ರೆಗೆ ಯಾರು ಕರೆತಂದರು ಮತ್ತು ಗಾಯಾಳುವಿನ ಮೇಲೆ ಯಾರು ಮತ್ತು ಯಾವ ಸ್ಥಳದಲ್ಲಿ ಹಲ್ಲೆ ಮಾಡಿದರು ಹಾಗೂ ಇನ್ನಿತರ ವಿವರಗಳನ್ನು ಬಹಿರಂಗಪಡಿಸಿರುವುದಿಲ್ಲವೆಂದು ನಿವೇದಿಸಿಕೊಂಡಿದ್ದಾರೆ. ಗಾಯಾಳು ಸಾಕ್ಷಿದಾರರು ನಿಜವಾಗಿಯೂ ಎಚ್ಚರದಿಂದಿದ್ದರೆ, ಖಂಡಿತವಾಗಿಯೂ ಅವರು ಹಲ್ಲೆಯ ಹಿನ್ನಲೆಯನ್ನು ಮತ್ತು ಅವರ ಮೇಲೆ ಯಾರು ಹಲ್ಲೆ ಮಾಡಿದರು ಎಂಬುದನ್ನು ಹೇಳಿರುತ್ತಿದ್ದರು; ಅಂಥ ಸಾಕ್ಷ್ಯದ ಕೊರತೆಯಲ್ಲಿ, ಈ ಮೊಕದ್ದಮೆಯಲ್ಲಿನ ಆಪಾದಿತ ವ್ಯಕ್ತಿಗಳನ್ನು ಸಿಕ್ಕಿಹಾಕಿಸಲು ಮಾತ್ರ ಅಂಥ ದಸ್ತಾವೇಜುಗಳನ್ನು ಸೃಷ್ಟಿಸಲಾಗಿದೆ ಮತ್ತು ಸೃಜಿಸಲಾಗಿದೆ ಎಂದು ಊಹಿಸಬಹುದಾಗಿದೆ; ಪ್ರಾಸಿಕ್ಯೂಷನ್ ಯಾವುದೇ ಉದ್ದೇಶವನ್ನು ಸಾಬೀತುಪಡಿಸಿರುವುದಿಲ್ಲ; ವಿಚಾರಣಾ ನ್ಯಾಯಾಲಯವು ಸಹ, ಪ್ರಾಸಿಕ್ಯೂಷನ್ ಸಾಕ್ಷ್ಯವನ್ನಾಧರಿಸಿ ಆರೋಪದ ಅಪರಾಧ ನಿರ್ಣಯವನ್ನು ತಪ್ಪಾಗಿ ನಿರ್ಣಯಿಸಿದೆ ಎಂದು ನ್ಯಾಯವಾದಿಗಳು ನಿವೇದಿಸಿಕೊಂಡಿದ್ದಾರೆ. ಇದಲ್ಲದೆ ಅವರು, ಪ್ರಥಮ ಮಾಹಿತಿ ವರದಿಯು (ಎಫ್.ಐ.ಆರ್) ತಡವಾಗಿ ಅಧಿಕಾರ ವ್ಯಾಪ್ತಿಯ ನ್ಯಾಯಾಲಯವನ್ನು ತಲುಪಿದ್ದು, ವಾದ ಮತ್ತು ಚರ್ಚೆ ನಡೆದಿದೆ ಹಾಗೂ ತರುವಾಯದಲ್ಲಿ ಪ್ರಕರಣವನ್ನು ಆಪಾದಿತ ವ್ಯಕ್ತಿಗಳ ವಿರುದ್ಧ ದಾಖಲಿಸಲಾಗಿದೆ ಎಂಬುದನ್ನು ಇದು ಸ್ವತಃ ಬಹಿರಂಗಪಡಿಸುತ್ತದೆ; ಆರೋಪಿಸಲಾದ ಘಟನೆ ನಡೆದಾಗ, ಮೃತ ರಾಜುವನ್ನಾಗಲಿ ಅಥವಾ ಇತರ ಗಾಯಗೊಂಡ ಸಾಕ್ಷಿದಾರರನ್ನಾಗಲಿ ಉಳಿಸಲು ಯಾರೇ ವ್ಯಕ್ತಿಗಳು ಮುಂದೆ ಬಂದಿಲ್ಲವೆಂದು ನಿವೇದಿಸಿಕೊಂಡಿದ್ದಾರೆ. ಈ ಕಾರಣಗಳ ಆಧಾರದ ಮೇಲೆ ಅವರು, ವಿಚಾರಣಾ ನ್ಯಾಯಾಲಯವು ಹೊರಡಿಸಿದ ತೀರ್ಪು ಮತ್ತು ಆದೇಶವನ್ನು ತಳ್ಳಿಹಾಕುವ ಮೂಲಕ ಅಪೀಲಿಗೆ ಅವಕಾಶ ನೀಡಬೇಕೆಂದು ಮನವಿ ಮಾಡಿಕೊಂಡಿದ್ದಾರೆ.

6. ಇದಕ್ಕೆ ತದ್ವಿರುದ್ಧವಾಗಿ, ಪ್ರತಿವಾದಿ–ರಾಜ್ಯದ ಪರ ಹಾಜರಾದ ಮಾನ್ಯ ಹೆಚ್ಚುವರಿ ಎಸ್‌ಪಿಪಿ ಶ್ರೀ ವಿಜಯಕುಮಾರ್ ಮಜಗೆಯವರು, ಆರೋಪಿತ ಘಟನೆಯ ಪ್ರತ್ಯಕ್ಷ ಸಾಕ್ಷಿಗಳಾಗಿರುವ ಪ್ರಾಸಾ.1, 2, 3, 5, 6ರಿಂದ 8 ಮತ್ತು 10 ಇವರು,

ಆಪಾದಿತ ವ್ಯಕ್ತಿಗಳು ಕಾನೂನುಬಾಹಿರ ಕೂಟವನ್ನು ರಚಿಸಿಕೊಂಡು, ಅವರು ಮಾತನಾಡುತ್ತಿರುವ ಸ್ಥಳಕ್ಕೆ ಬಂದು, ದೂರುದಾರನ ಮೇಲೆ ಹಲ್ಲೆ ಮಾಡಿದರೆಂದು ಮತ್ತು ಮೃತ ರಾಜು ಅಲ್ಲಿಗೆ ಬಂದಾಗ, ಆತನ ಮೇಲೆ ಸಹ ಅವರು ಮಾರಕ ಆಯುಧಗಳಿಂದ ಹಲ್ಲೆ ಮಾಡಿ, ಗಂಭೀರ ಗಾಯಗಳುಂಟಾಗುವಂತೆ ಮಾಡಿದರೆಂದು, ಅಂತಿಮವಾಗಿ ಆತನು ಸದರಿ ಗಾಯಗಳಿಂದ ಮರಣ ಹೊಂದಿದನೆಂದು ನೇರವಾಗಿ ಸಾಕ್ಷ್ಯ ನುಡಿದಿದ್ದಾರೆ. ಪ್ರತ್ಯಕ್ಷ ಸಾಕ್ಷಿಗಳ ಸಾಕ್ಷ್ಯವಿದ್ದಾಗ, ಪ್ರಾಸಿಕ್ಯೂಷನ್‌ರವರು ಉದ್ದೇಶವನ್ನು ಸಾಬೀತುಪಡಿಸಬೇಕಾದ ಅಗತ್ಯವಿರುವುದಿಲ್ಲವೆಂದು ಪ್ರಬಲವಾಗಿ ವಾದಿಸಿದ್ದಾರೆ. ಇದಲ್ಲದೆ ಅವರು, ಪ್ರಾಸಾ.21 ಮತ್ತು ಇತರ ಸಾಕ್ಷಿದಾರರು ನಿವೇಶನಕ್ಕೆ ಸಂಬಂಧಿಸಿದಂತೆ ವಿವಾದ ಇತ್ತೆಂಬುದನ್ನು ಸ್ಪಷ್ಟವಾಗಿ ತೋರಿಸಿಕೊಟ್ಟಿದ್ದಾರೆ ಮತ್ತು ಆ ಹಿನ್ನಲೆಯಲ್ಲಿ, ಎರಡು ಗುಂಪುಗಳು ಇದ್ದವು, ಒಂದು ಗುಂಪು ಇನ್ನೊಂದು ಗುಂಪಿನ ಮೇಲೆ ದಾಳಿ ಮಾಡಿ ಗಾಯಗಳನ್ನುಂಟು ಮಾಡಿದೆ; ಆದ್ದರಿಂದ, ಈ ಮೊಕದ್ದಮೆಯಲ್ಲಿ ಆಪಾದಿತ ವ್ಯಕ್ತಿಗಳನ್ನು ತಪ್ಪಾಗಿ ನಿರೂಪಿಸುವ ಪ್ರಶ್ನೆಯೇ ಇಲ್ಲವೆಂದು ವಾದಿಸಿದ್ದಾರೆ. ಇದಲ್ಲದೆ, ಮೃತನು ಮದ್ಯಸಾರವನ್ನು ಸೇವಿಸಿದ್ದರಿಂದಾಗಿ ಕೆಳಗೆ ಬಿದ್ದು ಗಾಯಗಳುಂಟಾದವು ಎಂದು ಆರೋಪಿಯು ಪ್ರತಿವಾದವನ್ನು ತೆಗೆದುಕೊಂಡಿದ್ದಾನಾದರೂ, ಇತರ ಗಾಯಗೊಂಡ ವ್ಯಕ್ತಿಗಳು ಹೇಗೆ ಮತ್ತು ಎಲ್ಲಿ ಗಾಯಗಳನ್ನು ಮಾಡಿಕೊಂಡರು ಎಂಬುದನ್ನು ಪ್ರತಿವಾದಿಯು ವಿವರಿಸಿರುವುದಿಲ್ಲ; ಅಂಥ ವಿವರಣೆ ಇಲ್ಲದಿರುವಲ್ಲಿ, ಗಾಯಗೊಂಡ ಸಾಕ್ಷಿದಾರರ ಹೇಳಿಕೆಯನ್ನು ಅಪರಾಧ ನಿರ್ಣಯದ ಉದ್ದೇಶಕ್ಕಾಗಿ ನ್ಯಾಯಾಲಯವು ಅವಲಂಬಿಸಬಹುದಾಗಿದೆ ಎಂದು ಅವರು ನಿವೇದಿಸಿಕೊಂಡಿದ್ದಾರೆ. ಇದಲ್ಲದೆ ಅವರು, ವೈದ್ಯಕೀಯ ಪ್ರಮಾಣಪತ್ರಗಳನ್ನು ಸರ್ಕಾರಿ ಆಸ್ಪತ್ರೆಯು ನೀಡಿರುವುದರಿಂದ, ಗಾಯಾಳುಗಳಿಗೆ ಸಂಬಂಧಿಸಿದಂತೆ ತಪ್ಪು ಪ್ರಮಾಣಪತ್ರಗಳನ್ನು ನೀಡುವ ಪ್ರಶ್ನೆಯೇ ಇರುವುದಿಲ್ಲ; ನ್ಯಾಯಾಲಯದ ಮುಂದೆ ಪ್ರಾಸಿಕ್ಯೂಷನ್‌ರವರು ಎಮ್‌ಎಲ್‌ಸಿ ರಿಜಿಸ್ಟರ್‌ನ ಉದ್ಧೃತ ಭಾಗಗಳನ್ನು ಸಹ ಮಂಡಿಸಿದ್ದಾರೆ ಮತ್ತು ಪಾಟಿ–ಸವಾಲನ್ನು ಮಾಡುವ ಸಮಯದಲ್ಲಿ, ಸದರಿ ದಸ್ತಾವೇಜನ್ನು ಅಲ್ಲಗಳೆದಿರುವುದಿಲ್ಲ; ಅಂಥ ಸಂದರ್ಭಗಳಲ್ಲಿ, ದೂರುದಾರನು ಮತ್ತು ಇತರ ಗಾಯಗೊಂಡವರು ವೈದ್ಯಕೀಯ ಪ್ರಮಾಣಪತ್ರಗಳನ್ನು ತಪ್ಪಾಗಿ ಸೃಜಿಸಿದ್ದಾರೆ ಎಂದು ಅಪೀಲುದಾರರು

ವಾದಿಸಲಾಗುವುದಿಲ್ಲವೆಂದು ನಿವೇದಿಸಿಕೊಂಡಿದ್ದಾರೆ. ಇದಲ್ಲದೆ ಅವರು, ಘಟನೆ ನಡೆದ ತಕ್ಷಣವೇ ಆಯುಧಗಳನ್ನು ಮತ್ತು ಆಪಾದಿತ ವ್ಯಕ್ತಿಗಳ ರಕ್ತಸಿಕ್ತ ಬಟ್ಟೆಗಳನ್ನು ಜಪ್ತಿ ಮಾಡಲಾಗಿದೆ; ವಾಸ್ತವವಾಗಿ ಅಂಥ ಘಟನೆ ನಡೆಯದೆ ಇದ್ದಿದ್ದರೆ, ಅವರು ಸದರಿ ವಸ್ತುಗಳನ್ನು ಹಾಜರುಪಡಿಸಲಾಗುತ್ತಿರಲಿಲ್ಲ ಎಂದು ನಿವೇದಿಸಿಕೊಂಡಿದ್ದಾರೆ. ಇದಲ್ಲದೆ ಅವರು, ಆಪಾದಿತ ವ್ಯಕ್ತಿಗಳು, ಆರೋಪಿತ ಘಟನೆಯಲ್ಲಿ ತೊಡಗಿಕೊಂಡಿಲ್ಲದೆ ಹೋಗಿದ್ದರೆ, ಅವರು ತಲೆಮರೆಸಿ ಕೊಳ್ಳಬಾರದಾಗಿತ್ತು, ಆದರೆ ಪ್ರಾಸಾ.19ರ ಸಾಕ್ಷ್ಯವು, ಆಪಾದಿತ ವ್ಯಕ್ತಿಗಳು ತಲೆಮರೆಸಿಕೊಂಡಿದ್ದರು ಮತ್ತು ತರುವಾಯದಲ್ಲಿ ಅವರನ್ನು ದಸ್ತಗಿರಿ ಮಾಡಲಾಗಿತ್ತು ಎಂಬುದನ್ನು ಸೂಚಿಸುತ್ತಿದ್ದು, ಆರೋಪಿತ ಘಟನೆಯಲ್ಲಿ ಆಪಾದಿತರ ಒಳಗೊಳ್ಳುವಿಕೆಯನ್ನು ತೋರಿಸಲು ಇದೂ ಸಹ ಒಂದು ಸಂದರ್ಭವಾಗಿದೆ ಎಂದು ನಿವೇದಿಸಿಕೊಂಡಿದ್ದಾರೆ. ಈ ಕಾರಣಗಳ ಆಧಾರದ ಮೇಲೆ, ವಿಚಾರಣಾ ನ್ಯಾಯಾಲಯವು ನೀಡಿದ ತೀರ್ಪು ಮತ್ತು ಆದೇಶವನ್ನು ಸ್ಥಿರೀಕರಿಸಿ, ಅಪೀಲನ್ನು ವಜಾಗೊಳಿಸಬೇಕೆಂದು ಅವರು ಮನವಿ ಮಾಡಿಕೊಂಡಿದ್ದಾರೆ.

7. ಈರ್ವರೂ ಪಕ್ಷಕಾರರು ಸಲ್ಲಿಸಿದ ನಿವೇದನೆಗಳನ್ನು ನಾವು ಎಚ್ಚರಿಕೆಯಿಂದ ಮತ್ತು ಜಾಗರೂಕತೆಯಿಂದ ಅವಲೋಕಿಸಿದ್ದೇವೆ ಹಾಗೂ ಪ್ರಶ್ನಿತ ತೀರ್ಪು ಮತ್ತು ಆದೇಶವನ್ನು ಒಳಗೊಂಡು ಮಂಡಿಸಲಾದ ದಾಖಲೆಗಳನ್ನು ಅವಲೋಕಿಸಿದ್ದೇವೆ. ಎಲ್ಲಾ ಸಾಕ್ಷಿದಾರರು ಸಂಬಂಧಿಕರಾಗಿದ್ದಾರೆ ಮತ್ತು ಪ್ರಾಸಾ.3 ಈಕೆಯು ಗಾಯಗೊಂಡವರ ಸಂಬಂಧಿಯಾಗಿದ್ದು, ಪಂಚಾಯತ್ ಸದಸ್ಯಳು ಸಹ ಆಗಿದ್ದಾಳೆ; ತನ್ನ ಸ್ಥಾನವನ್ನು ಬಳಸಿಕೊಳ್ಳುವ ಮೂಲಕ ಆಪಾದಿತರ ವಿರುದ್ಧ ಸುಳ್ಳು ಮೊಕದ್ದಮೆಯನ್ನು ಆಕೆಯು ದಾಖಲಿಸಿದ್ದಾಳೆ ಎಂಬುದು ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳ ವಾದವಾಗಿದ್ದಾಗ್ಯೂ, ಸಾಕ್ಷಿದಾರರು ಪರಸ್ಪರ ಸಂಬಂಧಿಗಳಾಗಿದ್ದಾರೆ ಎಂಬ ಕಾರಣ ಮಾತ್ರದಿಂದ, ಅವರ ಸಾಕ್ಷ್ಯ–ಪುರಾವೆಗಳನ್ನು ನಿರಾಕರಿಸಲಾಗುವುದಿಲ್ಲ ಎಂಬುದು ಸಾಬೀತಾದ ತತ್ವವಾಗಿದೆ. ಸಾಕ್ಷ್ಯವನ್ನು ಎಚ್ಚರಿಕೆಯಿಂದ ಮತ್ತು ಜಾಗರೂಕತೆಯಿಂದ ಪರಿಶೀಲಿಸುವುದು ನ್ಯಾಯಾಲಯದ ಕರ್ತವ್ಯವಾಗಿದೆ. ಪ್ರಾಸಾ.3 ಸಾಕ್ಷ್ಯವನ್ನು ನೋಡುವುದಾದರೆ, ಆಕೆಯು ಪ್ರಾಸಾ.1

ಈತನ ಸಂಬಂಧಿಕಳಾಗಿದ್ದಾಳೆ ಮತ್ತು ತಾಲೂಕು ಪಂಚಾಯಿತಿಯ ಸದಸ್ಯಳು ಸಹ ಆಗಿದ್ದಾಳೆ. ಇನ್ನೊಬ್ಬ ಸಾಕ್ಷಿದಾರನಿಗೆ ಅವಳು ಸಂಬಂಧಿಕಳಾಗಿರುವಳು ಮತ್ತು ಮದ್ದೂರು ತಾಲೂಕು ಪಂಚಾಯಿತಿಯ ಸದಸ್ಯಳಾಗಿರುವಳು ಎಂಬ ಕಾರಣ ಮಾತ್ರದಿಂದ, ಆಕೆಯ ಅಧಿಕಾರ ಮತ್ತು ಸ್ಥಾನವನ್ನು ಬಳಸಿ ಆಪಾದಿತ ವ್ಯಕ್ತಿಗಳ ವಿರುದ್ಧ ಮೊಕದ್ದಮೆಯನ್ನು ದಾಖಲಿಸಲಾಗಿದೆ ಎಂಬ ಊಹೆ ಮಾಡಲಾಗುವುದಿಲ್ಲ. ಸದರಿ ಸಾಕ್ಷಿದಾರರ ಸಾಕ್ಷ್ಯವನ್ನು ನಾವು ಪರಿಶೀಲಿಸಿದರೆ, ಗಲಾಟೆ ಆಗುತ್ತಿದೆ ಎಂದು ಕೇಳಿದ ನಂತರ ಆಕೆಯು ಘಟನೆ ನಡೆದ ಸ್ಥಳಕ್ಕೆ ಧಾವಿಸಿದ್ದಾಳೆ ಮತ್ತು ಅವರು ಏಕೆ ಜಗಳವಾಡುತ್ತಿದ್ದಾರೆ ಎಂದು ಸಹ ಕೇಳಿದ್ದಾಳೆ, ಪ್ರಾಸಾ.1–ಕಾಮರಾಜು ಮತ್ತು ಕಮಲಮ್ಮ ಇವರು ಆಕೆಗೆ ಕಾರಣ ವಿವರಿಸಿದ್ದಾರೆ ಮತ್ತು ಆ ಸಮಯದಲ್ಲಿ ಆಪಾದಿತ ವ್ಯಕ್ತಿಗಳು ಮಚ್ಚಿನಿಂದ ಪ್ರಾಸಾ.1 ಈತನ ಮೇಲೆ ಹಲ್ಲೆ ಮಾಡಿದ್ದಾರೆ ಹಾಗೂ ಇತರ ಆಪಾದಿತ ವ್ಯಕ್ತಿಗಳು ಸಹ ಮೃತ ರಾಜುವನ್ನು ಒಳಗೊಂಡು ಇತರ ಗಾಯಗೊಂಡ ವ್ಯಕ್ತಿಗಳ ಮೇಲೆ ಹಲ್ಲೆ ಮಾಡಿದ್ದಾರೆ. ಗಲಾಟೆ ಪ್ರಾರಂಭವಾದ ನಂತರ ಪ್ರಾಸಾ.3 ಸ್ಥಳಕ್ಕೆ ಹೋದಾಗ, ಆಕೆಯ ಅಧಿಕಾರವನ್ನು ಬಳಸಿಕೊಂಡು ಆಪಾದಿತ ವ್ಯಕ್ತಿಗಳನ್ನು ತಪ್ಪಾಗಿ ಸಿಕ್ಕಿಹಾಕಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ನಿಶಾನೆ–ಪಿ7ರಿಂದ ಪಿ12ರವರೆಗಿನ ದಸ್ತಾವೇಜುಗಳನ್ನು ನಾವು ಅವಲೋಕಿಸಿದಾಗಲೂ ಸಹ, ಅವು ಗಾಯಗೊಂಡ ವ್ಯಕ್ತಿಗಳು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿದ್ದಾರೆ ಎಂಬುದನ್ನು ಸ್ಪಷ್ಟವಾಗಿ ತೋರಿಸಿಕೊಡುತ್ತವೆ. ನಿಶಾನೆ ಪಿ13ರಿಂದ ಪಿ18 ಇವು ಎಮ್‌ಎಲ್‌ಸಿ ರಿಜಿಸ್ಟರಿನ ಉದ್ಧೃತ ಭಾಗಗಳಾಗಿದ್ದು, ಅವುಗಳನ್ನು ವ್ಯವಹಾರದ ಸಾಮಾನ್ಯ ಕ್ರಮದಲ್ಲಿ ಇಡಲಾಗಿದೆ ಹಾಗೂ ಅವು ಗಾಯಗೊಂಡವರಿಗೆ ಉಂಟಾದ ಗಾಯಗಳು ಮತ್ತು ಆಪಾದಿತ ವ್ಯಕ್ತಿಗಳು ಎಸಗಿದ ಹಲ್ಲೆಯ ಸಂಬಂಧದಲ್ಲಿನ ನಮೂದುಗಳಾಗಿವೆ. ಗಾಯಗೊಂಡವರಿಗೆ ಮತ್ತು ಮೃತನಿಗೆ ಸಂಬಂಧಿಗಳಾದವರ ಮತ್ತು ನಿಕಟ ಸಂಬಂಧಿಗಳಾದವರ ಸಾಕ್ಷ್ಯದ ಅಂಗೀಕಾರಾರ್ಹತೆ ಬಗ್ಗೆ ಮಾಡಿದ ಮೊದಲ ವಾದಕ್ಕೆ ಸಂಬಂಧಿಸಿದಂತೆ, ಸಂಬಂಧಿಕರ ಸಾಕ್ಷ್ಯವನ್ನು ಪರಿಗಣಿಸುವಲ್ಲಿ ಯಾವುದೇ ನಿರ್ಬಂಧವಿಲ್ಲ. ಆ ಸಾಕ್ಷಿದಾರರ ಸಾಕ್ಷ್ಯದ ಕೂಲಂಕುಷ ವಿಶ್ಲೇಷಣೆಯ ನಂತರ, ಅದು ಸ್ಪಷ್ಟವಾಗಿದೆ, ತರ್ಕಬದ್ಧವಾಗಿದೆ ಮತ್ತು ಹೆಚ್ಚು ದ್ವಂದ್ವಗಳಿರುವುದಿಲ್ಲ. ಅಂಥ ಸಾಕ್ಷ್ಯವು ಸುಸಂಗತವಾಗಿದ್ದು, ವೈದ್ಯಕೀಯ ಸಾಕ್ಷ್ಯದಿಂದ ಅದು

ಸಮರ್ಥನೆಗೊಂಡಾಗ, ಅವರು ಸಂಬಂಧಿಕರು ಮತ್ತು ಹಿತಾಸಕ್ತ ಸಾಕ್ಷಿದಾರರು ಎಂಬ ಕಾರಣದ ಮೇಲೆ ಮಾತ್ರ ಅದನ್ನು ನಿರಾಕರಿಸುವುದು ಸಾಧ್ಯವಿಲ್ಲ. ಅವರ ಸಾಕ್ಷ್ಯವನ್ನು ನಿರಾಕರಿಸಲು ಅಂಥ ಯಾವುದೇ ಸಾಕ್ಷ್ಯವನ್ನು ಸಹ ಮಂಡಿಸಿರುವುದಿಲ್ಲ. ಈ ಹಿನ್ನಲೆಯಲ್ಲಿ, ಆಪಾದಿತರ ಪರ ಮಾನ್ಯ ನ್ಯಾಯವಾದಿಗಳು ಮಾಡಿದ ವಾದವು ಕಾನೂನಿನಲ್ಲಿ ಅಂಗೀಕಾರಾರ್ಹವಾಗಿರುವುದಿಲ್ಲ. ಆರೋಪಿತ ಘಟನೆ ನಡೆದಾಗ, ಆ ಪ್ರದೇಶದಲ್ಲಿ ಎಷ್ಟೊಂದು ಮನೆಗಳು ಇದ್ದಾಗ್ಯೂ, ಯಾರೇ ಸ್ವತಂತ್ರ ಸಾಕ್ಷಿದಾರರು ಮುಂದೆ ಬಂದಿರುವುದಿಲ್ಲ ಎಂಬುದು ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳ ಎರಡನೇ ವಾದವಾಗಿದೆ. ಆರೋಪಿತ ಘಟನೆ ನಡೆದಾಗ, ಗಲಾಟೆಯನ್ನು ಶಮನಗೊಳಿಸಲು ಸ್ವತಂತ್ರ ಸಾಕ್ಷಿದಾರಾರೂ ಬಂದಿರುವುದಿಲ್ಲ ಎಂಬುದು ನಿಜ. ಆದರೆ, ಒಂದೇ ಗ್ರಾಮದಲ್ಲಿನ ನಿವೇಶನಕ್ಕೆ ಸಂಬಂಧಿಸಿದಂತೆ ಎರಡು ಗುಂಪುಗಳು ಕಾದಾಡುವಾಗ, ಯಾರೇ ಇತರ ವ್ಯಕ್ತಿಗಳು ಸಾಮಾನ್ಯವಾಗಿ ಬರುವುದಿಲ್ಲ ಮತ್ತು ಆ ಪ್ರಕರಣದಲ್ಲಿ, ಅದರಲ್ಲೂ ಕ್ರಿಮಿನಲ್ ಪ್ರಕರಣದಲ್ಲಿ ಸಿಕ್ಕಿಹಾಕಿಕೊಳ್ಳಲು ಮುಂದಾಗುವುದಿಲ್ಲ. ಸಂಬಂಧಿಕರು ಮತ್ತು ಹಿತಾಸಕ್ತ ಸಾಕ್ಷಿದಾರರು ಮಾತ್ರ ಮುಂದೆ ಬಂದು ಸಾಕ್ಷ್ಯವನ್ನು ನೀಡುತ್ತಾರೆ. ಮೇಲಿನ ಚರ್ಚೆಯ ಹಿನ್ನಲೆಯಲ್ಲಿ, ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು ಎತ್ತಿದ ವಾದದಲ್ಲಿ ಯಾವುದೇ ಹುರುಳಿಲ್ಲವೆಂಬುದು ನಮ್ಮ ಪರಿಗಣಿತ ಅಭಿಪ್ರಾಯವಾಗಿದ್ದು, ಹೀಗಾಗಿ ಅದನ್ನು ತಳ್ಳಿಹಾಕಲಾಗಿದೆ.

8. ಗಾಯಗೊಂಡವರನ್ನು ಉಳಿಸಲು ಮತ್ತು ಜಗಳವನ್ನು ಬಿಡಿಸಲು ಯಾರೊಬ್ಬರೂ ಮುಂದೆ ಬರಲಿಲ್ಲವೆಂಬುದು ಅಪೀಲುದಾರರ ಪರ ನ್ಯಾಯವಾದಿಗಳ ವಾದವಾಗಿದೆ. ಆದರೆ, ಪ್ರಾಸಾ.1 ಈತನನ್ನು ಪಾಟಿ–ಸವಾಲು ಮಾಡುವ ಸಮಯದಲ್ಲಿ, ಆಪಾದಿತ ವ್ಯಕ್ತಿಗಳು ಹಲ್ಲೆ ಮಾಡಿದಾಗ, ಆತನು ಗದ್ದಲ ಮಾಡಿ ಕೂಗಿದನು ಮತ್ತು ಗಾಯಗೊಂಡವರನ್ನು ಉಳಿಸಲು ಯಾರಾದರೂ ಮುಂದೆ ಬಂದರೆ ಸದರಿ ವ್ಯಕ್ತಿಗಳನ್ನು ಸಹ ಆಪಾದಿತ ವ್ಯಕ್ತಿಗಳು ಕೊಲ್ಲುವುದಾಗಿ ಬೆದರಿಸಿದ್ದರಿಂದಾಗಿ ಯಾರೂ ಮುಂದೆ ಬರಲಿಲ್ಲವೆಂದು; ಹೀಗಾಗಿ, ಘಟನೆ ನಡೆದ ಸ್ಥಳದ ಹತ್ತಿರದಲ್ಲಿ ವಾಸಿಸುತ್ತಿದ್ದ ವ್ಯಕ್ತಿಗಳು ಬರಲಿಲ್ಲ ಮತ್ತು ಅವರನ್ನು ಕಾಪಾಡಲಿಲ್ಲ ಎಂದು

ಸಾಕ್ಷ್ಯ ನುಡಿದಿದ್ದಾರೆ. ಸದರಿ ಸಾಕ್ಷ್ಯವು ಸಹಜ ಮತ್ತು ನಿರೀಕ್ಷಿಸಬಹುದಾದುದಾಗಿ ಕಂಡುಬರುತ್ತದೆ. ಎರಡು ಗುಂಪುಗಳ ನಡುವೆ ಗಲಾಟೆಯಾದಾಗ ಮತ್ತು ಗಾಯಗೊಂಡವರನ್ನು ಕಾಪಾಡಲು ಅವರು ಮುಂದೆ ಬಂದರೆ ಅವರನ್ನು ಮುಗಿಸುವುದಾಗಿ ಆಪಾದಿತ ವ್ಯಕ್ತಿಗಳು ಅವರನ್ನು ಬೆದರಿಸಿದರೆ, ಆಗ ಅಂಥ ಸಂದರ್ಭಗಳಲ್ಲಿ ಯಾವ ವ್ಯಕ್ತಿಗಳೂ ತಮ್ಮ ಜೀವವನ್ನು ಅಪಾಯಕ್ಕೀಡು ಮಾಡಿಕೊಳ್ಳಲು ಮತ್ತು ಆಪಾದಿತ ವ್ಯಕ್ತಿಗಳಿಂದ ಹಲ್ಲೆಗೊಳಗಾಗಲು ಮುಂದೆ ಬರುವುದಿಲ್ಲ.

9. ದಾಖಲೆಗಳು ಮತ್ತು ಪೇಪರ್ ಬುಕ್‌ನಲ್ಲಿ ಕಂಡುಬರುವಂತೆ, ಪ್ರಾ.ಸಾ.1, 2, 3, 5ರಿಂದ 8 ಮತ್ತು 10 ಇವರು ಆರೋಪಿತ ಘಟನೆಯ ಪ್ರತ್ಯಕ್ಷ ಸಾಕ್ಷಿಗಳಾಗಿದ್ದಾರೆ. ಅವರು ತಮ್ಮ ಸಾಕ್ಷ್ಯದಲ್ಲಿ, ಪ್ರಾಸಾ.1 ಮತ್ತು ಇತರ ಗಾಯಗೊಂಡವರು ಚುಂಚಮ್ಮಳ ಮನೆಯ ಮುಂದೆ ರಾತ್ರಿ ಸುಮಾರು 10.00 ಗಂಟೆಗೆ ಮಾತನಾಡುತ್ತಿದ್ದಾಗ, ಆಪಾದಿತ ವ್ಯಕ್ತಿಗಳು ಕಾನೂನುಬಾಹಿರ ಕೂಟ ರಚಿಸಿಕೊಂಡು ಬಂದರು ಮತ್ತು ಅವರಿಗೆ ಕೆಟ್ಟ ಪದಗಳಿಂದ ಬಯ್ದರು ಹಾಗು ಅದೇ ಸಮಯದಲ್ಲಿ, ಆರೋಪಿ ಸಂಖ್ಯೆ: 1–ಆನಂದ ಈತನು ಮಚ್ಚಿನಿಂದ ದೂರುದಾರನ ತಲೆಗೆ ಹೊಡೆದನು ಮತ್ತು ಆರೋಪಿ ಸಂಖ್ಯೆ 2–ಸತೀಶ ಈತನು ದೂರುದಾರನ ಬಲತೋಳಿಗೆ ಚಾಕುವಿನಿಂದ ಇರಿದನು ಹಾಗೂ ಶೇಖರ್ ಮತ್ತು ಸಂತೋಷ್ ಇವರು ದೂರುದಾರನ ಬಲ ಗಾಲಿನ ಮೇಲೆ ಮತ್ತು ದೇಹದ ಇತರ ಭಾಗಗಳ ಮೇಲೆ ದೊಣ್ಣೆಯಿಂದ ಹಲ್ಲೆ ಮಾಡಿದರು ಎಂದು ಸಾಕ್ಷಿ ನೀಡಿದ್ದಾರೆ. ಇದಲ್ಲದೆ, ಪ್ರಾಸಾ.4–ಕಮಲಮ್ಮ ಈಕೆಯು ಆಪಾದಿತ ವ್ಯಕ್ತಿಗಳನ್ನು ಹಲ್ಲೆಯನ್ನು ಮಾಡುತ್ತಿರುವ ಬಗ್ಗೆ ಪ್ರಶ್ನಿಸಿದಾಗ, ಆಪಾದಿತ ವ್ಯಕ್ತಿಗಳು ಆಕೆಯ ಮೇಲೂ ಸಹ ಮಚ್ಚಿನಿಂದ ಮತ್ತು ದೊಣ್ಣೆಯಿಂದ ಹಲ್ಲೆ ಮಾಡಿದ್ದಾರೆ ಹಾಗೂ ಆಕೆಯು ಭಯಂಕರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆಂದು ಬೆದರಿಸಿದ್ದಾರೆ; ಈ ನಡುವೆ, ಮೃತ ರಾಜು ಸಹ ಅಲ್ಲಿಗೆ ಬಂದು, ಅವರು ಏಕೆ ಹಲ್ಲೆ ಮಾಡುತ್ತಿರುವರು ಎಂದು ಕೇಳಿದ್ದಾನೆ, ಆ ಸಮಯದಲ್ಲಿ ಆಪಾದಿತ ವ್ಯಕ್ತಿಗಳು ಆತನ ತಲೆ ಮತ್ತು ದೇಹದ ಇತರ ಭಾಗಗಳ ಮೇಲೆ ಹಲ್ಲೆ ಮಾಡಿದರು, ತತ್ಪರಿಣಾಮವಾಗಿ,

ಆತನು ಕೆಳಗೆ ಬಿದ್ದು, ಪ್ರಜ್ಞೆ ತಪ್ಪಿದನು ಎಂದು ಅವರು ಸಾಕ್ಷಿ ನುಡಿದಿದ್ದಾರೆ. ಇದಲ್ಲದೆ ಅವರು, ನಿರ್ಮಲಾ, ಮಧುಕರ್, ಭಾನುಪ್ರಕಾಶ್ ಇವರು ಜಗಳವನ್ನು ಬಿಡಿಸಲು ಬಂದಾಗ, ಆಪಾದಿತ ವ್ಯಕ್ತಿಗಳು ಅವರ ಮೇಲೂ ಸಹ ಹಲ್ಲೆ ಮಾಡಿದ್ದು, ಗಾಯಗಳನ್ನುಂಟು ಮಾಡಿದ್ದಾರೆ ಎಂದು ಸಾಕ್ಷಿ ನುಡಿದಿದ್ದಾರೆ. ಈ ಎಲ್ಲಾ ಸಾಕ್ಷಿದಾರರ ಸಾಕ್ಷ್ಯಗಳನ್ನು ಪರಿಶೀಲಿಸಲಾಗಿ, ದೂರುದಾರ ಪ್ರಾಸಾ.1, ಮತ್ತು ಮೃತ ರಾಜು ಹಾಗೂ ಇತರ ಗಾಯಗೊಂಡ ಸಾಕ್ಷಿದಾರರ ಮೇಲೆ ಹಲ್ಲೆ ಮಾಡುವಲ್ಲಿ ಪ್ರತಿಯೊಬ್ಬ ಆಪಾದಿತರ ಬಹಿರಂಗ ಕೃತ್ಯಗಳಷ್ಟರಮಟ್ಟಿಗೆ ಸುಸಂಗತತೆ ಮತ್ತು ಸಮರ್ಥನೆ ಇದೆ. ಮಂಚಯ್ಯ ಮತ್ತು ಲಕ್ಷ್ಮಯ್ಯ ಇವರೀರ್ವರ ನಡುವೆ ವಲಗೇರೆಹಳ್ಳಿ ಗ್ರಾಮದ ನಿವೇಶನ ಸಂಖ್ಯೆ: 26ಕ್ಕೆ ಸಂಬಂಧಿಸಿದಂತೆ ವಿವಾದವಿದ್ದಿತು ಹಾಗೂ ಆಪಾದಿತರು ಲಕ್ಷ್ಮಯ್ಯನನ್ನು ಬೆಂಬಲಿಸಿದರೆ, ಗಾಯಗೊಂಡವರು ಮಂಚಯ್ಯನನ್ನು ಪ್ರತಿನಿಧಿಸುತ್ತಿದ್ದರು ಎಂದು ಸಹ ಅವರು ನೇರವಾಗಿ ಸಾಕ್ಷಿ ನುಡಿದ್ದಿದಾರೆ. ಈ ಹಿನ್ನಲೆಯಲ್ಲಿ, ವಿವಾದವಿತ್ತು ಮತ್ತು ಆಪಾದಿತ ವ್ಯಕ್ತಿಗಳು ಕಾನೂನುಬಾಹಿರವಾಗಿ ಗುಂಪುಗೂಡಿ ಮಾರಕ ಆಯುಧಗಳನ್ನು ತಂದಿದ್ದರು ಹಾಗೂ ಗಾಯಗೊಂಡಿರುವ ಸಾಕ್ಷಿದಾರರ ಮೇಲೆ ಅಷ್ಟೇ ಅಲ್ಲದೆ ಮೃತ ರಾಜುವಿನ ಮೇಲೆ ಹಲ್ಲೆ ಮಾಡಿದ್ದಾರೆ ಎಂಬುದು ಸ್ಪಷ್ಟ. ಆರೋಪಿತ ಘಟನೆ ಕುರಿತಂತೆ ಪ್ರತ್ಯಕ್ಷ ಸಾಕ್ಷಿಗಳಿದ್ದಾಗ, ಇಲ್ಲಿ ಉದ್ದೇಶ ಸುಸಂಗತವಾಗುವುದಿಲ್ಲ. ಪ್ರಸ್ತುತ ಮೊಕದ್ದಮೆಯಲ್ಲಿ, ಪ್ರಾಸಿಕ್ಯೂಷನ್‌ರವರು ಸಹ, ಆಪಾದಿತರು ಮತ್ತು ಗಾಯಗೊಂಡ ವ್ಯಕ್ತಿಗಳು, ನಿವೇಶನದ ಬಗ್ಗೆ ಇದ್ದ ವಿವಾದದ ಸಂಬಂಧದಲ್ಲಿ ವೈರತ್ವವನ್ನು ಹೊಂದಿದ್ದರು ಎಂಬುದನ್ನು ಸಾಬೀತುಪಡಿಸಿದ್ದಾರೆ.

10. ಗಾಯಗೊಂಡ ಸಾಕ್ಷಿದಾರರ ಸಾಕ್ಷಿಗೆ ಹೆಚ್ಚಿನ ಮನ್ನಣೆ ನೀಡಬೇಕು ಮತ್ತು ಆರೋಪಿತ ಘಟನೆ ನಡೆದ ಸ್ಥಳದಲ್ಲಿ ಆ ಸಮಯದಲ್ಲಿ ಅವರ ಇರುವಿಕೆಗೆ ಹೆಚ್ಚು ಮನ್ನಣೆ ನೀಡಬೇಕು ಅದನ್ನು ಸಂಶಯದಿಂದ ನೋಡುವಂತಿಲ್ಲ ಎಂಬುದು ಕಾನೂನಿನ ಸುಸ್ಥಾಪಿತ ತತ್ವವಾಗಿದೆ. ಗಾಯಗೊಂಡ ಸಾಕ್ಷಿದಾರರ ಸಾಕ್ಷ್ಯವನ್ನು ನಿರಾಕರಿಸುವ ಸಲುವಾಗಿ ನಿಜವಾದ ಹಲ್ಲೆಕೋರರನ್ನು ಉಳಿಸುವುದು ಮತ್ತು ಅಮಾಯಕ ವ್ಯಕ್ತಿಯನ್ನು ಸಿಕ್ಕಿಹಾಕಿಸುವುದು ಸೂಕ್ತವಲ್ಲ ಎಂಬುದು ಸಹ

ಇತ್ಯರ್ಥವಾದ ಸಂಗತಿ. ನ್ಯಾಯಾಲಯದ ಮುಂದೆ ತರ್ಕಬದ್ಧ ಸಾಕ್ಷ್ಯವಿರಬೇಕು, ಆಗ ಮಾತ್ರ ಗಾಯಗೊಂಡ ವ್ಯಕ್ತಿಗಳ ಸಾಕ್ಷ್ಯವನ್ನು ಅಲ್ಲಗಳೆಯಲು ಸಾಧ್ಯ. ಈ ಹಿನ್ನಲೆಯಲ್ಲಿ, ಪ್ರತಿವಾದಿ ನ್ಯಾಯವಾದಿಗಳು ಯಾವುದೇ ಸಾಕ್ಷ್ಯವನ್ನು ತಂದಿರುವುದಿಲ್ಲ ಮತ್ತು ಹಾಗಾಗಿ, ಗಾಯಗೊಂಡ ವ್ಯಕ್ತಿಗಳ ಸಾಕ್ಷ್ಯವು ಅಂಗೀಕಾರಾರ್ಹವಾದುದು ಮತ್ತು ವಿಶ್ವಸನೀಯವಾದುದು ಆಗಿದೆ. ಕಾನೂನಿನ ಈ ಪ್ರಸ್ತಾವವನ್ನು, ವರದಿ ಮಾಡಿದ ***ಚಂದ್ರಶೇಖರ್ ಮತ್ತು ಇನ್ನೊಬ್ಬರು –ವಿರುದ್ಧ– ರಾಜ್ಯ***[1] ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಹೇಳಿದ್ದು, ಅದರಲ್ಲಿನ 10ನೇ ಕಂಡಿಕೆಯಲ್ಲಿ ಈ ಮುಂದಿನಂತೆ ಅಭಿಪ್ರಾಯಪಡಲಾಗಿದೆ:–

> *'10. ಅನ್ಯಥಾ ತೋರಿಸಿಕೊಡದ ಹೊರತು, ಗಾಯಗೊಂಡ ವ್ಯಕ್ತಿಯು ಸತ್ಯವನ್ನು ಹೇಳುತ್ತಿದ್ದಾನೆ ಎಂದು ಕ್ರಿಮಿನಲ್ ಅಧಿಕಾರವ್ಯಾಪ್ತಿಯು ಪೂರ್ವಭಾವನೆ ಮಾಡುವುದರಿಂದ, ಅದೇ ಘಟನೆಯಲ್ಲಿ ಆತನ ಸಾಕ್ಷ್ಯಕ್ಕೆ ಹೆಚ್ಚಿನ ಮನ್ನಣೆಯನ್ನು ಅದು ನೀಡಿದೆ. ಕಾನೂನು ಇತ್ಯರ್ಥಗೊಂಡಿದ್ದಾಗ್ಯೂ ಮತ್ತು ಪೂರ್ವನಿರ್ದಶನಗಳಿಗೆ ಬದ್ಧವಾಗಿದ್ದಾಗ್ಯೂ, ಬ್ರಹ್ಮ ಸ್ವರೂಪ್ –ವಿರುದ್ಧ– ಉತ್ತರ ಪ್ರದೇಶ ರಾಜ್ಯ ಮೊಕದ್ದಮೆಯ ಉಲ್ಲೇಖವನ್ನು ಪ್ರಯೋಜನಕಾರಿಯಾಗಿ ಮಾಡಬಹುದಾಗಿದ್ದು ಅದರಲ್ಲಿ ಈ ಮುಂದಿನಂತೆ ಅಭಿಪ್ರಾಯಪಡಲಾಗಿದೆ: (ಎಸ್‌ಸಿಸಿ ಪಿ 302. ಕಂಡಿಕೆ 28)*
>
> *"28. ಘಟನೆಯಲ್ಲಿ ಸಾಕ್ಷಿದಾರನು ಸ್ವತಃ ಗಾಯಗೊಂಡಿದ್ದಲ್ಲಿ, ಅಂಥ ಸಾಕ್ಷಿದಾರನ ಸಾಕ್ಷ್ಯವನ್ನು, ಅಪರಾಧದ ಸನ್ನಿವೇಶದಲ್ಲಿ ಆತನ ಇರುವಿಕೆಯು ಸಹಜ ಖಾತರಿಯೊಂದಿಗೆ ಬರುವ ಸಾಕ್ಷಿದಾರನಾಗಿರುವುದರಿಂದ*

1. (2017) 13 ಎಸ್‌ಸಿಸಿ 585

> *ಮತ್ತು ಮತ್ತೊಬ್ಬರನ್ನು ತಪ್ಪಾಗಿ ಸಿಕ್ಕಿಹಾಕಿಸುವ ಸಲುವಾಗಿ ತನ್ನ ಮೇಲೆ ಹಲ್ಲೆ ಮಾಡಿದವನನ್ನು/ರನ್ನು ಉಳಿಸುವ ಸಂಭವವಿರುವುದಿಲ್ಲವಾದ್ದರಿಂದ, ಸಾಮಾನ್ಯವಾಗಿ ಅಂಥ ಸಾಕ್ಷ್ಯವನ್ನು ಅತ್ಯಂತ ವಿಶ್ವಸನೀಯುವೆಂದು ಪರಿಗಣಿಸಲಾಗುತ್ತದೆ."......*

11. ***ಮೊಹಮ್ಮದ್ ಇಷಾಕ್ ಮತ್ತು ಇತರರು -ವಿರುದ್ಧ- ಪಶ್ಚಿಮ ಬಂಗಾಳ ರಾಜ್ಯ ಮತ್ತು ಇತರರು***[2] ಮೊಕದ್ದಮೆಯ ಮುಖ್ಯ ಟಿಪ್ಪಣಿ-ಎ ಇದರಲ್ಲಿ, ಮೇಲೆ ಹೇಳಿದ ಕಾನೂನಿನ ತತ್ವವನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಪುನರುಚ್ಚರಿಸಿದ್ದು, ಅದನ್ನು ಈ ಕೆಳಗಿನಂತೆ ಓದಲಾಗಿದೆ:-

> *"ಎ. ಕ್ರಿಮಿನಲ್ ವಿಚಾರಣೆ - ಸಾಕ್ಷಿದಾರರು - ಗಾಯಗೊಂಡ ಸಾಕ್ಷಿದಾರರು - ವಿಶ್ವಸನೀಯತೆ - ಗುಣಾರ್ಹತೆಗಳ ಪ್ರಮಾಣಕಗಳು - ಪ್ರಸ್ತುತ ಮೊಕದ್ದಮೆಯಲ್ಲಿನ ಪ್ರಾಸಾ.1, 2 ಮತ್ತು 4 ಇವರಿಗೆ ಗಂಭೀರ ಗಾಯಗಳಾಗಿದ್ದು, ಅವರ ಸಾಕ್ಷ್ಯವನ್ನು ನ್ಯಾಯಾಲಯವು ನಂಬಿತ್ತು - ಗಾಯಗೊಂಡ ಸಾಕ್ಷಿದಾರರ ಸಾಕ್ಷ್ಯವು ಅಪಾರ ಮನ್ನಣೆಗೆ ಅರ್ಹವಾಗಿದೆ - ಅವರು ನಿಜವಾದ ಅಪರಾಧಿಯನ್ನು ಉಳಿಸಿ, ಅಮಾಯಕ ವ್ಯಕ್ತಿಯನ್ನು ಸಿಕ್ಕಿಹಾಕಿಸುತ್ತಾರೆ ಎಂಬುದು ಅಸಂಭವ - ಸಹಜವಾಗಿಯೇ, ಗಾಯಗೊಂಡ ಸಾಕ್ಷಿದಾರರ ಸಾಕ್ಷ್ಯವನ್ನು ಯಾಂತ್ರಿಕವಾಗಿ ಒಪ್ಪಬೇಕು ಎಂಬ ಬದಲಿಸಲಾಗದ ಯಾವುದೇ ನಿಯುಮವಿಲ್ಲ, ಅದು ಸಂಭಾವ್ಯತೆಗಳ ಸಾಮರಸ್ಯವು ಸಹ ಆಗಿರಬಹುದು - ಸಾಕ್ಷಿದಾರರು ಹಿತಾಸಕ್ತ ವ್ಯಕ್ತಿಗಳೇ ಮತ್ತು ಅವರು ಕೆಲವು ಉದ್ದೇಶಗಳಿಂದಾಗಿ ಸಾಕ್ಷ್ಯ ನೀಡಿದ್ದಾರೆಯೇ ಎಂಬುದು ಸಾಕ್ಷ್ಯದ ವಿಶ್ವಸನೀಯತೆಯನ್ನು ನಿರ್ಧರಿಸುವುದಕ್ಕೆ ಏಕಮಾತ್ರ ಮಾನದಂಡವಾಗುವುದಿಲ್ಲ - ಘಟನೆ ನಡೆದ ಸ್ಥಳದಲ್ಲಿ ಅವರ*

2. (2013) 14 ಎಸ್‌ಸಿಸಿ 581

*ವಾಸ್ತವ ಇರುವಿಕೆಯ ಸಾಧ್ಯತೆ ಮತ್ತು ಸಂಭವನೀಯತೆಯು ಮುಖ್ಯ ಮಾನದಂಡವಾಗಿರುತ್ತದೆ."*

12. ಮೇಲೆ ಹೇಳಿದ ನಿರ್ಣಯಗಳಲ್ಲಿ ವಿಧಿಸಿದ ಅನುಪಾತವನ್ನು ಗಮನದಲ್ಲಿರಿಸಿಕೊಂಡು, ದಿನಾಂಕ: 13.06.2002ರಂದು ಆರೋಪಿತ ಘಟನೆಯಲ್ಲಿ ಗಾಯಗಳುಂಟಾಗಿದ್ದ ಮೃತನನ್ನು ಒಳಗೊಂಡು ಗಾಯಗೊಂಡವರನ್ನು ಪರೀಕ್ಷಿಸಿದ ಪ್ರಾಸಾ.15–ಡಾ. ಕೆ.ಎಸ್. ವಿನಯ್‌ಕುಮಾರ್ ಇವರ ಸಾಕ್ಷ್ಯವನ್ನು ನಾವು ಅವಲೋಕಿಸಿದರೆ, ಗಾಯಗೊಂಡ ರಾಜು, ಕಮಲಮ್ಮ, ಮಧುಕರ, ಭಾನುಪ್ರಕಾಶ್, ನಿರ್ಮಲ ಮತ್ತು ದೂರುದಾರ ಇವರು, ದಿನಾಂಕ: 12.6.2002ರಂದು ಸುಮಾರು 10.30 ಗಂಟೆಯಲ್ಲಿ ಹಲ್ಲೆಯಿಂದಾದ ಗಾಯಗಳ ಹಿನ್ನಲೆಯೊಂದಿಗೆ ಅವರ ಬಳಿಗೆ ಬಂದಿದ್ದರು ಎಂದು ಅವರು ಸಾಕ್ಷ್ಯ ನುಡಿದಿದ್ದಾರೆ. ಡಾ. ಕೆ.ಎಸ್. ವಿನಯ್‌ಕುಮಾರ್ ಗಾಯಗೊಂಡವರನ್ನು ಪರೀಕ್ಷಿಸಿ, ನಿಶಾನೆ–ಪಿ7ರಿಂದ ಪಿ12ರವರೆಗಿನ ಗಾಯದ ಪ್ರಮಾಣಪತ್ರಗಳನ್ನು ಅವರಿಗೆ ನೀಡಿದ್ದಾರೆ. ಅವರು ಎಮ್‌ಎಲ್‌ಸಿ ರಿಜಿಸ್ಟರಿನ ಉದ್ಧೃತ ಭಾಗಗಳನ್ನು ಸಹ ಹಾಜರುಪಡಿಸಿದ್ದು, ಅವುಗಳನ್ನು ನಿಶಾನೆ–ಪಿ13ರಿಂದ ಪಿ18 ಎಂದು ಗುರುತಿಸಲಾಗಿದೆ. ಪ್ರತ್ಯಕ್ಷ ಸಾಕ್ಷಿದಾರರ ಸಾಕ್ಷ್ಯಕ್ಕೆ ಸಂವಾದಿಯಾಗಿ ಗಾಯಗೊಂಡ ಎಲ್ಲರಿಗೂ ಸಹ ಗಾಯಗಳುಂಟಾಗಿವೆ. ತರುವಾಯದಲ್ಲಿ ದಿನಾಂಕ: 16.7.2002ರಂದು ಮರಣ ಹೊಂದಿದ ಮೃತನ ದೇಹವನ್ನು ಮರಣೋತ್ತರ ಪರೀಕ್ಷೆ ಮಾಡಿದ ವೈದ್ಯ–ಪ್ರಾಸಾ.14 ಇವರ ಸಾಕ್ಷ್ಯದಿಂದ ಕಂಡುಬರುವಂತೆ ಸಹ, ವಲಗೆರೆಹಳ್ಳಿ ಗ್ರಾಮದಲ್ಲಿ ದಿನಾಂಕ: 12.6.2002ರಂದು ರಾತ್ರಿ 10.00 ಗಂಟೆಗೆ ದೊಣ್ಣೆಯಿಂದ ಮಾಡಿದ ಹಲ್ಲೆಯ ಕಾರಣದಿಂದ ಆತನು ಮೃತನಾದನು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಆಪಾದಿತ–ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು, ಪ್ರಾಸಾ.14 ಮತ್ತು ಪ್ರತ್ಯಕ್ಷ ಸಾಕ್ಷಿದಾರರ ಸಾಕ್ಷ್ಯದಲ್ಲಿ ಅಸಾಮಂಜಸ್ಯವಿದೆ ಎಂದು ವಾದಿಸಿರುವರಾದರೂ, ಆರೋಪಿ ಸಂಖ್ಯೆ: 1 ಈತನು ಮೃತನ ಮೇಲೆ ಮಚ್ಚಿನಿಂದ ಹಲ್ಲೆ ಮಾಡಿದನೆಂದು ಪ್ರತ್ಯಕ್ಷ ಸಾಕ್ಷಿದಾರರು ಸಾಕ್ಷಿ ನುಡಿದಿದ್ದಾರೆ ಮತ್ತು ವೈದ್ಯರು ದೊಣ್ಣೆಯಿಂದ ಹಲ್ಲೆ ಮಾಡಲಾಗಿದೆ ಎಂದು ಹೇಳಿದ್ದಾರೆ, ಪ್ರಾಸಾ.15ರ ಸಾಕ್ಷ್ಯದ ಎಚ್ಚರಿಕೆಯ ಮತ್ತು ಸೂಕ್ಷ್ಮ ಪರಿಶೀಲನೆಯಿಂದ,

ಮೇಲೆ ಹೇಳಿಲಾದ ಅದೇ ಆಯುಧದಿಂದ ಹಲ್ಲೆ ಮಾಡಿದ ಕಾರಣದಿಂದ ಆ ಗಾಯಗಳು ಆತನಿಗೆ ಆಗಿವೆ ಎಂದು ಸಾಕ್ಷ್ಯ ನುಡಿದಿದ್ದಾನೆ. ಈ ಹಿನ್ನಲೆಯಲ್ಲಿ, ಆತನು ಕೈಕೊಡಲಿ, ಮಚ್ಚು, ದೊಣ್ಣೆ ಮತ್ತು ಕಲ್ಲನ್ನು ಸಹ ಆತನು ನೋಡಿದ್ದಾನೆ. ಪ್ರತ್ಯಕ್ಷ ಸಾಕ್ಷಿದಾರರ ಸಾಕ್ಷ್ಯದಿಂದ ಕಂಡುಬರುವಂತೆ, ಪ್ರತಿಯೊಬ್ಬ ಆಪಾದಿತನ ದ್ವೇಷಪೂರ್ಣ ಕೃತ್ಯಗಳನ್ನು ಅವರು ಮೃತನ ಮತ್ತು ಗಾಯಗೊಂಡವರ ಮೇಲೆ ಹಲ್ಲೆ ಮಾಡಿದ ಆಯುಧ ಸಹಿತವಾಗಿ ಮುಚ್ಚುಮರೆಯಿಲ್ಲದೆ ಮತ್ತು ಪ್ರಾಮಾಣಿಕವಾಗಿ ಹೇಳಿದ್ದಾರೆ. ಈ ಹಿನ್ನಲೆಯಲ್ಲಿ, ಪ್ರತ್ಯಕ್ಷ ಸಾಕ್ಷಿದಾರರು ಮತ್ತು ವೈದ್ಯಕೀಯ ಸಾಕ್ಷ್ಯದಲ್ಲಿ ಯಾವುದೇ ಅಸಮಂಜಸತೆ ಇದ್ದರೆ, ನ್ಯಾಯಾಲಯವು ಪ್ರತ್ಯಕ್ಷ ಸಾಕ್ಷಿದಾರರ ಸಾಕ್ಷ್ಯವನ್ನು ನಂಬುತ್ತದೆ. ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ, ವೈದ್ಯಕೀಯ ಸಾಕ್ಷ್ಯಕ್ಕಿಂತ ಪ್ರತ್ಯಕ್ಷ ಸಾಕ್ಷ್ಯವು ಪ್ರಭಾವವುಳ್ಳದ್ದಾಗಿರುತ್ತದೆ. ನಿಮ್ಹಾನ್ಸ್ ಆಸ್ಪತ್ರೆಗೆ ಕೋಮಾ ಸ್ಥಿತಿಯಲ್ಲಿ ಗಾಯಗಳಿಂದ ಜರ್ಝರಿತನಾದ ಸದರಿ ಮೃತ ರಾಜುವನ್ನು ತಂದಾಗ, ಆತನನ್ನು ಪ್ರಾಸಾ.14 ಈತನು ನೋಡಿಲ್ಲವಾದ್ದರಿಂದ, ಆತನ ಸಾಕ್ಷ್ಯವು ಸಹ ಆಪಾದಿತ–ಅಪೀಲುದಾರಿಗೆ ಸಹಾಯಕರವಾಗಿಲ್ಲ. ಇಂಥ ಸಂದರ್ಭಗಳ ಮೇರೆಗೆ, ಮರಣಕ್ಕೆ ಕಾರಣವಾಗಿದೆಯೆಂದು ಹೇಳಲಾಗಿರುವ ಹಿನ್ನಲೆಯು, ಪ್ರಾಸಿಕ್ಯೂಷನ್‌ರವರ ಮೊಕದ್ದಮೆಯನ್ನು ನಿರ್ಬಂಧಿಸುವುದಿಲ್ಲ. ಘಟನೆ ನಡೆದ ಸ್ಥಳದಲ್ಲಿ ಅವರು ವಾಸ್ತವವಾಗಿ ಇದ್ದರು ಎಂಬ ಸಾಧ್ಯತೆ ಮತ್ತು ಸಂಭಾವ್ಯತೆ ಇತ್ತೇ ಎಂಬುದು ಮುಖ್ಯ ಮಾನದಂಡವಾಗುತ್ತದೆ. ಅವರಿಗೆ ಆದ ಗಾಯಗಳು ಅವರು ಅಲ್ಲಿದ್ದರು ಎಂಬುದನ್ನು ಸಂಭಾವ್ಯವನ್ನಾಗಿಸುತ್ತದೆ. ಗಾಯಗೊಂಡ ಪ್ರತ್ಯಕ್ಷ ಸಾಕ್ಷಿದಾರರ ಸಾಕ್ಷ್ಯವು, ಪ್ರಾಸಾ.14 ಮತ್ತು 15 ಇವರನ್ನು ಒಳಗೊಂಡು ಇತರ ಸಾಕ್ಷಿದಾರರ ಸಾಕ್ಷ್ಯಕ್ಕೆ ಮತ್ತು ತನಿಖಾಧಿಕಾರಿಯು ಆಯುಧಗಳನ್ನು ಜಫ್ತಿ ಮಾಡಿರುವುದಕ್ಕೆ ಸಮರ್ಥನೆ ಒದಗಿಸುತ್ತದೆ. ಘಟನೆ ನಡೆದ ತಕ್ಷಣವೇ ಆಪಾದಿತ ವ್ಯಕ್ತಿಗಳು ಘಟನೆ ನಡೆದ ಸ್ಥಳದಲ್ಲೇ ಆಯುಧಗಳನ್ನು ಎಸೆದು ಪರಾರಿಯಾಗಿದ್ದಾರೆ ಮತ್ತು ಅವುಗಳನ್ನು ನಾಗಯ್ಯ ಎಂಬ ಹೆಸರಿನ ಒಬ್ಬ ವ್ಯಕ್ತಿಯು ಸಂಗ್ರಹಿಸಿದ್ದಾನೆ ಎಂಬುದು ಸಹ ಪ್ರಾಸಿಕ್ಯೂಷನ್ ವಾದವಾಗಿದೆ. ನಾಗಯ್ಯನಿಗೆ ಗಾಯಗೊಂಡವರು ಸಹ ಜೊತೆಗೂಡಿದ್ದರು ಮತ್ತು ಸಾಕ್ಷಿದಾರರ ಸಾಕ್ಷ್ಯದಲ್ಲಿ ಹಾಗೂ ಸದರಿ ಆಯುಧಗಳ ಜಫ್ತಿಯ ವಿಷಯದಲ್ಲಿ ಅಸಾಮಂಜಸ್ಯವಿದೆ ಎಂದು ಆಪಾದಿತ–ಅಪೀಲುದಾರರ

ಪರ ಮಾನ್ಯ ನ್ಯಾಯವಾದಿಗಳ ವಾದವಾಗಿದ್ದರೂ, ಸಹಜವಾಗಿಯೇ ಸಾಕ್ಷಿದಾರರು ಅಪರಾಧದ ಸನ್ನಿವೇಶವನ್ನು ಅದು ಇದ್ದಂತೆ ಬಿಟ್ಟುಬಿಡುತ್ತಾರಾದರೂ, ಪ್ರಸ್ತುತ ಮೊಕದ್ದಮೆಯಲ್ಲಿ, ಸದರಿ ಆಯುಧಗಳನ್ನು ನಾಗಯ್ಯನು ತೆಗೆದುಕೊಂಡು ತನ್ನ ಮನೆಯಲ್ಲಿ ಇಟ್ಟುಕೊಂಡಿದ್ದಾನೆ ಮತ್ತು ತರುವಾಯದಲ್ಲಿ ಅವುಗಳನ್ನು ಆತನು ಹಾಜರುಪಡಿಸಿದ್ದಾನೆ. ಆತನು ಆಯುಧಗಳನ್ನು ಸಂಗ್ರಹಿಸಿ, ಅವುಗಳನ್ನು ತನ್ನ ಮನೆಯಲ್ಲಿ ಇರಿಸಿಕೊಂಡಿದ್ದನು ಎಂಬ ಕಾರಣ ಮಾತ್ರದಿಂದ, ಪ್ರತ್ಯಕ್ಷ ಸಾಕ್ಷಿದಾರರ ಸಾಕ್ಷ್ಯವನ್ನು ಅಲ್ಲಗಳೆಯಲಾಗುವುದಿಲ್ಲ. ಈ ಹಿನ್ನಲೆಯಲ್ಲಿ, ಆಪಾದಿತ–ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು ತೆಗೆದುಕೊಂಡ ನಿಲುವು ಸಮರ್ಥನೀಯವಾಗಿರುವುದಿಲ್ಲ ಮತ್ತು ಅದನ್ನು ತಳ್ಳಿಹಾಕಲಾಗಿದೆ.

13. ಅಪೀಲುದಾರರ ಪರ ನ್ಯಾಯವಾದಿಗಳ ಮುಂದಿನ ವಾದವೆಂದರೆ, ದೂರನ್ನು ದಿನಾಂಕ: 13.06.2002ರಂದು ಸುಮಾರು ಬೆಳಿಗ್ಗೆ 1.10 ಗಂಟೆಗೆ ನಿಶಾನೆ–ಪಿ1ರ ಪ್ರಕಾರ ದಾಖಲಿಸಿದಾಗ್ಯೂ, ಪ್ರಾಸಾ.28 ಇವರ ಪ್ರಥಮ ಮಾಹಿತಿ ವರದಿ (ಎಫ್‌ಐಆರ್)ಯನ್ನು ತೆಗೆದುಕೊಂಡು ಹೋಗಿ, ದಿನಾಂಕ: 13.6.2002ರ ಬೆಳಿಗ್ಗೆ ಸುಮಾರು 11.00 ಗಂಟೆಗೆ ಅಧಿಕಾರ ವ್ಯಾಪ್ತಿಯುಳ್ಳ ಮ್ಯಾಜಿಸ್ಟ್ರೇಟರಿಗೆ ಹಸ್ತಾಂತರಿಸಿದ್ದಾರೆ; ಪ್ರಾಸಾ.28 ಈತನ ಸಾಕ್ಷ್ಯವನ್ನು ಪರಿಶೀಲಿಸಲಾಗಿ, ಅದು ದಿನಾಂಕ: 13.06.2002ರ ಬೆಳಿಗ್ಗೆ ಸುಮಾರು 1.40 ಗಂಟೆಗೆ, ಪ್ರಥಮ ಮಾಹಿತಿ ವರದಿಯನ್ನು ಪ್ರಾಸಾ.28 ಇವರ ವಶಕ್ಕೆ ಒಪ್ಪಿಸಲಾಗಿತ್ತು ಮತ್ತು ನೀಡಲಾಗಿತ್ತು ಹಾಗೂ ಅವರು ನ್ಯಾಯಾಲಯದಲ್ಲಿ ಕ್ರಮವಾಗಿ ಕಾರ್ಯನಿರ್ವಹಿಸುತ್ತಿದ್ದುದರಿಂದಾಗಿ, ತಂದಿದ್ದ ಪ್ರಥಮ ಮಾಹಿತಿ ವರದಿಯನ್ನು ತೆಗೆದುಕೊಳ್ಳಲು ಮತ್ತು ಅದನ್ನು ಖುದ್ದಾಗಿ ಬೆಳಿಗ್ಗೆ 11.00 ಗಂಟೆಗೆ ಸಲ್ಲಿಸಲು ಅವರಿಗೆ ನಿರ್ದೇಶಿಸಲಾಗಿತ್ತು ಎಂಬುದು ವೇದ್ಯವಾಗುತ್ತದೆ. ಪ್ರಥಮ ಮಾಹಿತಿ ವರದಿಯನ್ನು ಬೆಳಿಗ್ಗೆ ಸುಮಾರು 1.10 ಗಂಟೆಯಲ್ಲಿ ದಾಖಲಿಸಿದಾಗ ಮತ್ತು ಅಧಿಕಾರವ್ಯಾಪ್ತಿಯುಳ್ಳ ನ್ಯಾಯಾಲಯಕ್ಕೆ ಅದನ್ನು ಹಸ್ತಾಂತರಿಸುವ ಸಲುವಾಗಿ ಬೆಳಿಗ್ಗೆ 1.40 ಗಂಟೆಗೆ ಹಸ್ತಾಂತರಿಸಿದಾಗ, ಅಂಥ ಸಂದರ್ಭಗಳಲ್ಲಿ, ಸಂಬಂಧಪಟ್ಟ ಪೊಲೀಸರ ಕಡೆಯಿಂದ ಪ್ರಥಮ ಮಾಹಿತಿ ವರದಿಯನ್ನು ನೀಡುವಲ್ಲಿ ಯಾವುದೇ ವಿಳಂಬವಾಗಿರುವುದಿಲ್ಲ. ಅದನ್ನು ತೆಗೆದುಕೊಂಡು

ಹೋಗುವಲ್ಲಿ ಮತ್ತು ಬಟವಾಡೆ ಮಾಡುವಲ್ಲಿ ಮಾತ್ರ ವಿಳಂಬವಾಗಿದೆ. ಈ ಹಿನ್ನಲೆಯಲ್ಲಿ, ವಿಳಂಬವಾಗಿದೆ ಮತ್ತು ಪ್ರಾಸಿಕ್ಯೂಷನ್‌ರವರ ವಾದವನ್ನು ತಿದ್ದುವ ಮತ್ತು ಸೃಷ್ಟಿಸುವ ಎಲ್ಲ ಸಾಧ್ಯತೆ ಇದೆ ಎಂಬ ಯಾವುದೇ ಪ್ರತಿಕೂಲ ಊಹೆ ಮಾಡಲಾಗುವುದಿಲ್ಲ.

14. ಅದು ಹೇಗಾದರೂ ಇರಲಿ, ಪ್ರಾಸಾ. 28 ಈತನ ಸಾಕ್ಷ್ಯದಿಂದ ಕಂಡುಬರುವಂತೆ ಸಹ, ದಿನಾಂಕ: 13.06.2002ರಂದು ಬೆಳಿಗ್ಗೆ 11.00 ಗಂಟೆಗೆ ಅಧಿಕಾರವ್ಯಾಪ್ತಿಯುಳ್ಳ ನ್ಯಾಯಾಲಯಕ್ಕೆ ಪ್ರಥಮ ಮಾಹಿತಿ ವರದಿಯನ್ನು ಹಸ್ತಾಂತರಿಸಲಾಗಿತ್ತು ಎಂದು ಆತನು ಸಾಕ್ಷ್ಯ ನುಡಿದಿದ್ದಾನೆ. ಈ ಸಾಕ್ಷಿದಾರನನ್ನು ಪ್ರತಿವಾದಿಗಳು, ಅವರಿಗೆ ಚೆನ್ನಾಗಿ ಗೊತ್ತಿರುವ ಕಾರಣಗಳಿಗಾಗಿ ಪಾಟಿ–ಸವಾಲು ಮಾಡಿರುವುದಿಲ್ಲ. ಈ ಸಾಕ್ಷಿದಾರನನ್ನು ಪಾಟಿ–ಸವಾಲು ಮಾಡದೆ ಇದ್ದಾಗ, ಅಂಥ ಸಂದರ್ಭಗಳಲ್ಲಿ, ಆಪಾದಿತ–ಅಪೀಲುದಾರರು ಅಧಿಕಾರ ವ್ಯಾಪ್ತಿಯುಳ್ಳ ನ್ಯಾಯಾಲಯಕ್ಕೆ ಪ್ರಥಮ ಮಾಹಿತಿ ವರದಿಯನ್ನು ಕಳುಹಿಸುವಲ್ಲಿ ವಿಳಂಬವಾಗಿದೆ ಮತ್ತು ಪ್ರಾಸಿಕ್ಯೂಷನ್‌ರ ವಾದವನ್ನು ಸೃಷ್ಟಿಸುವ ಸಾಧ್ಯತೆ ಇದೆ ಎಂದು ಈಗ ವಾದಿಸಲಾಗುವುದಿಲ್ಲ. ಸದರಿ ವಾದವು ಯಾವುದೇ ಬಲವನ್ನು ಹೊಂದಿರುವುದಿಲ್ಲ ಮತ್ತು ಹಾಗಾಗಿ, ಅದು ಸಮರ್ಥನೀಯವಾಗಿಲ್ಲ ಮತ್ತು ತಳ್ಳಿಹಾಕಲು ಯೋಗ್ಯವಾಗಿದೆ ಎಂಬುದು ನಮ್ಮ ಪರಿಗಣಿತ ಅಭಿಪ್ರಾಯವಾಗಿದ್ದು, ತದನುಸಾರ ಅದನ್ನು ತಳ್ಳಿಹಾಕಲಾಗಿದೆ.

15. ಆಪಾದಿತನ ನಡತೆಯಿಂದ ಕಂಡುಬರುವಂತೆ ಸಹ, ಘಟನೆ ನಡೆದ ತರುವಾಯ ಕೂಡಲೇ, ಆಪಾದಿತ ಸಂಖ್ಯೆ 3 ಮತ್ತು 5 ಇವರು ತಲೆಮರೆಸಿಕೊಂಡಿದ್ದಾರೆ. ಪ್ರಾಸಾ.19ರ ಸಾಕ್ಷ್ಯದ ಪ್ರಕಾರ, ಅವರನ್ನು ದಿನಾಂಕ: 4.07.2002ರಂದು ದಸ್ತಗಿರಿ ಮಾಡಲಾಯಿತು ಮತ್ತು ಪ್ರಾಸಾ.19 ಈತನನ್ನು ಸಹ ಆಪಾದಿತನ ಬಂಧನಕ್ಕೆ ಸಂಬಂಧಿಸಿದಂತೆ ಪಾಟಿ–ಸವಾಲು ಮಾಡಿರುವುದಿಲ್ಲ. ಆಪಾದಿತ ವ್ಯಕ್ತಿಗಳು ಹಲ್ಲೆ ಮಾಡಿದ್ದಾರೆ ಮತ್ತು ತರುವಾಯದಲ್ಲಿ ಅವರು ಘಟನೆಯ ಸ್ಥಳದಿಂದ ಪರಾರಿಯಾಗಿದ್ದಾರೆ ಎಂಬ ಪರಿಣಾಮಕ್ಕೆ ಸಾಕ್ಷ್ಯದಲ್ಲಿ

ಸುಸಂಗತತೆಯಿದೆ, ಆಪಾದಿತ ವ್ಯಕ್ತಿಗಳು ಅಪರಾಧ ಎಸಗಿದ ತರುವಾಯ ಬಚ್ಚಿಟ್ಟುಕೊಳ್ಳುವ ಸಲುವಾಗಿ ತಲೆಮರೆಸಿಕೊಂಡಿದ್ದಾರೆ ಎಂಬ ಊಹೆಗೆ ಬರಬಹುದಾಗಿದೆ.

16. ಆಪಾದಿತರ ಪರ ಮಾನ್ಯ ನ್ಯಾಯವಾದಿಗಳು ಪ್ರಾಸಾ.26 ಈತನ ಸಾಕ್ಷ್ಯದ ಕಡೆ ನಮ್ಮ ಗಮನ ಸೆಳೆದು, ಮುದ್ದೆಮಾಲು ಸಂಖ್ಯೆ: 1–ಚಾಕು ಇದು ಪ್ಲಾಸ್ಟಿಕ್ ಹಿಡಿಯನ್ನು ಹೊಂದಿತ್ತು ಎಂದು ಪ್ರಾಸಾ.26 ಸಾಕ್ಷಿ ನುಡಿದಿದ್ದಾನೆ; ಆದರೆ, ಇತರ ಸಾಕ್ಷಿದಾರರು ಚಾಕು ಮರದ ಹಿಡಿಯನ್ನು ಹೊಂದಿತ್ತು ಎಂದು ಸಾಕ್ಷಿ ನುಡಿದಿದ್ದಾರೆ ಎಂದು ವಾದಿಸಿದ್ದಾರೆ. ಈ ವಿಚಾರವಾಗಿ ಸಾಕ್ಷ್ಯದಲ್ಲಿ ಅಸಾಂಗತ್ಯತೆ ಇದೆ. ಪ್ರಾಸಾ.26 ಇವರ ಪಾಟಿ–ಸವಾಲಿನಿಂದ ಕಂಡುಬರುವಂತೆ, ನಿಶಾನೆ.ಪಿ3 ಪ್ರಕಾರ ಸದರಿ ಚಾಕುವನ್ನು ಜಪ್ತಿ ಮಾಡಲಾಗಿತ್ತು ಮತ್ತು ಮುದ್ದೆಮಾಲು ಸಂಖ್ಯೆ: 1–ಚಾಕು ಇದು ಪ್ಲಾಸ್ಟಿಕ್ ಹಿಡಿಯನ್ನು ಹೊಂದಿತ್ತು ಎಂದು ಆತನು ಸಾಕ್ಷಿ ನುಡಿದಿದ್ದಾನೆ. ಕಾನೂನುಬಾಹಿರ ಕೂಟ ರಚಿಸಿಕೊಂಡು ಬಂದ ಆಪಾದಿತ ವ್ಯಕ್ತಿಗಳು ಮೃತನ ಮತ್ತು ಗಾಯಗೊಂಡವರ ಮೇಲೆ ಹಲ್ಲೆ ಮಾಡಿದಾಗ, ಅದೂ ರಾತ್ರಿ 10.00 ಗಂಟೆಗೆ ಹಲ್ಲೆ ಮಾಡಿದಾಗ, ಅಂಥ ಸಂದರ್ಭಗಳಲ್ಲಿ, ಸಹಜವಾಗಿಯೇ ಅದೂ ಸಹ ಹಲ್ಲೆ ಮಾಡಿದ ಸಮಯದಲ್ಲಿ, ಆಪಾದಿತರು ಹಲ್ಲೆ ಮಾಡಿದ ಚಾಕುವಿನ ಹಿಡಿ ಯಾವ ರೀತಿಯದ್ದಾಗಿತ್ತೆಂದು ಅತ್ಯಂತ ಸೂಕ್ಷ್ಮವಾಗಿ ಯಾರೊಬ್ಬರೂ ಗಮನಿಸುವುದಿಲ್ಲ ಮತ್ತು ಅವರ ಗಮನವೆಲ್ಲಾ ಗಲಾಟೆಯ ಕಡೆಗೆ ಇರುತ್ತದೆ. ಸದರಿ ವಿರೋಧಾಭಾಸವು ಸಣ್ಣ ವಿರೋಧಾಭಾಸವಾಗಿ ಕಂಡುಬರುತ್ತದೆಯಾದ್ದರಿಂದ, ಇದು ಪ್ರಾಸಿಕ್ಯೂಷನ್‌ರವರ ವಾದವನ್ನು ನಿರ್ಬಂಧಿಸುವುದಿಲ್ಲ. ಈ ಹಿನ್ನಲೆಯಲ್ಲಿ, ಅಪೀಲುದಾರರ ಪರ ನ್ಯಾಯವಾದಿಗಳು ಈ ಸಂಬಂಧವಾಗಿ ಎತ್ತಿದ ವಾದವನ್ನು ತಳ್ಳಿಹಾಕಲಾಗಿದೆ.

17. ಇದಕ್ಕೆ ತದ್ವಿರುದ್ಧವಾಗಿ, ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು, ಆರೋಪಿತ ಘಟನೆಯ ಸಮಯದಲ್ಲಿ ಆಪಾದಿತ ವ್ಯಕ್ತಿಗಳು ಮೃತ ರಾಜುವಿನ ಮರಣಕ್ಕೆ ಕಾರಣವಾಗುವಂತೆ ಯಾವುದೇ ಉದ್ದೇಶ ಅಥವಾ ಕಾರಣವನ್ನು ಹೊಂದಿರಲಿಲ್ಲ ಮತ್ತು ಮೃತನು ಒಂದು ತಿಂಗಳು ಕಳೆದ ನಂತರ ಆಸ್ಪತ್ರೆಯಲ್ಲಿ

ಮರಣ ಹೊಂದಿದ್ದಾನೆ; ಇಂಥ ಸಂದರ್ಭಗಳಲ್ಲಿ, ವಿಚಾರಣಾ ನ್ಯಾಯಾಲಯವು, ಕಡಿಮೆ ಅಪರಾಧಕ್ಕಾಗಿ ಆಪಾದಿತರ ಅಪರಾಧ ನಿರ್ಣಯ ಮಾಡಬೇಕಿತ್ತು ಎಂದು ನಿವೇದಿಸಿಕೊಂಡಿದ್ದಾರೆ. ಆದರೆ, ಪ್ರತ್ಯಕ್ಷ ಸಾಕ್ಷಿದಾರರು ಮತ್ತು ವೈದ್ಯ-ಪ್ರಾಸಾ.15 ಇವರ ಸಾಕ್ಷ್ಯದಿಂದ ಕಂಡುಬರುವಂತೆ, ಮೃತನಿಗೆ ತೀವ್ರವಾದ ಹೊಡೆತದ ತಲೆ ಗಾಯವಾಗಿತ್ತು, ಹಣೆಯ ಭಾಗದಿಂದ ತಲೆಯ ಹಿಂಭಾಗದವರೆಗೆ ತಲೆ ಬುರುಡೆಯನ್ನು ವ್ಯಾಪಿಸಿದ ಎಡ ಭಾಗದ ಮೇಲೆ ವಿಭಜಿತ ಸೀಳು ಗಾಯವಾಗಿತ್ತು ಮತ್ತು ಪ್ರತ್ಯಕ್ಷ ಸಾಕ್ಷಿದಾರರ ಸಾಕ್ಷ್ಯವು ಸಹ, ಮೃತ ರಾಜು ಜಗಳವನ್ನು ಬಿಡಿಸಲು ಪ್ರಯತ್ನಿಸುತ್ತಿದ್ದಾಗ, ಆತನ ತಲೆಯ ಮೇಲೆ ಆರೋಪಿ ಸಂಖ್ಯೆ: 1 ಈತನು ಹೊಡೆದಿದ್ದಾನೆ ಎಂದು ತೋರಿಸುತ್ತದೆ. ಹಲ್ಲೆ ನಡೆಸಿದ ಸಮಯದಲ್ಲಿ, ಆತನು ಪ್ರಾಸಾ.2-ಕಮಲಮ್ಮಳ ಮೇಲೆ ಹಲ್ಲೆ ಮಾಡುವಾಗ, 'ಸಾಯಿ' ಎಂದು ಕಿರಿಚಿದನು ಹಾಗೂ ಮೃತನ ಮೇಲೆ ಆತನು ಹಲ್ಲೆ ಮಾಡಿದಾಗಲು ಸಹ "ಇವನಿಗೂ ಸಹ ಹಾಗೆ ಮಾಡುವೆನು ಮತ್ತು ಹೊಡೆದುಹಾಕುವೆನು" ಎಂದು ಕಿರುಚಿದನು; ಇದು ಮೃತನ ಮರಣಕ್ಕೆ ಕಾರಣವಾಗುವ ಉದ್ದೇಶವನ್ನು ಆತನು ಹೊಂದಿದ್ದನು ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ. ಅದು ಏನಾದರಾಗಲಿ, ಆಪಾದಿತ ವ್ಯಕ್ತಿಗಳು ಕಾನೂನುಬಾಹಿರ ಕೂಟವನ್ನು ರಚಿಸಿಕೊಂಡು, ಮಾರಕ ಆಯುಧಗಳೊಂದಿಗೆ ಕಾಮರಾಜು ಮತ್ತು ಕಮಲಮ್ಮ ಮಾತನಾಡುತ್ತಿದ್ದ ಚುಂಚಮ್ಮಳ ಮನೆ ಬಳಿಗೆ ಅವರ ಮೇಲೆ ಹಲ್ಲೆ ಮಾಡುವ ಉದ್ದೇಶದಿಂದ ಬಂದಿದ್ದರು ಎಂಬುದು ಪ್ರಾಸಿಕ್ಯೂಷನ್‌ರವರ ವಾದವಾಗಿದೆ. ಅವರು ತಮ್ಮೊಂದಿಗೆ ಆಯುಧಗಳನ್ನು, ಅದೂ ಸಹ ಮಾರಕ ಆಯುಧಗಳನ್ನು ತಂದಿರುವಾಗ, ಅಂಥ ಸಂದರ್ಭಗಳಲ್ಲಿ, ಮರಣಕ್ಕೆ ಕಾರಣವಾಗುವ ಯಾವುದೇ ಉದ್ದೇಶವಿರದೆ ಆ ಕ್ಷಣದ ಉತ್ತೇಜನದಿಂದ ಘಟನೆ ನಡೆಯಿತು ಎಂದು ನಿರ್ಣಯಿಸಲಾಗುವುದಿಲ್ಲ. ಈ ಹಿನ್ನಲೆಯಲ್ಲಿ, ಅಪೀಲುದಾರರ ಪರ ನ್ಯಾಯವಾದಿಗಳು ಇದಕ್ಕೆ ಸಂಬಂಧಿಸಿದಂತೆ ಮಾಡಿದ ವಾದವು, ಆಪಾದಿತರ ಅಪರಾಧ ನಿರ್ಣಯದ ಪ್ರಯೋಜನವನ್ನು ವಿಸ್ತರಿಸುವ ಮತ್ತು ಕಡಿಮೆ ಅಪರಾಧಕ್ಕಾಗಿ ಶಿಕ್ಷೆಯನ್ನು ತಗ್ಗಿಸುವ ಸಲುವಾಗಿನ ಯಾವುದೇ ಕಾರಣವು ನಿಲ್ಲುವುದಿಲ್ಲ.

18. ವಿಚಾರಣಾ ನ್ಯಾಯಾಲಯವು ನೀಡಿದ ತೀರ್ಪನ್ನು ಮತ್ತು ಆದೇಶವನ್ನು ನಾವು ಅವಲೋಕಿಸಿದ್ದೇವೆ. ನಿಶಾನೆಗಳೊಂದಿಗಿನ ಕೆಳ ನ್ಯಾಯಾಲಯದ ದಾಖಲೆಗಳನ್ನು ಒಳಗೊಂಡು, ದಾಖಲೆಯಲ್ಲಿರುವ ಎಲ್ಲ ಸಾಕ್ಷ್ಯವನ್ನು ಸಹ ನಾವು ಅವಲೋಕಿಸಿದ್ದೇವೆ. ಪ್ರತ್ಯಕ್ಷ ಸಾಕ್ಷಿದಾರರ ಸಾಕ್ಷ್ಯದೊಂದಿಗೆ ಸುಸಂಗತವಾಗಿರುವ ದಾಖಲೆಯಲ್ಲಿನ ಎಲ್ಲಾ ಸಾಕ್ಷ್ಯವನ್ನು ಪರಿಗಣಿಸಿದ ನಂತರ, ವಿಚಾರಣಾ ನ್ಯಾಯಾಲಯವು ಸರಿಯಾದ ನಿರ್ಣಯಕ್ಕೆ ಬಂದು, ಇದರಲ್ಲಿನ ಆಪಾದಿತ–ಅಪೀಲುದಾರರ ಅಪರಾಧವನ್ನು ಸರಿಯಾಗಿಯೇ ನಿರ್ಣಯಿಸಿದೆ. ದಾಖಲೆಯಲ್ಲಿನ ಎಲ್ಲಾ ಸಾಕ್ಷ್ಯದ ಗುಣಾರ್ಹತೆಗಳನ್ನು ಮರು–ವಿವೇಚಿಸಿದ ನಂತರವೂ, ಇದು, ಆಪಾದಿತರಿಗೆ ಪ್ರಯೋಜನ ನೀಡುವಂತಾಗಲು ಮತ್ತೊಂದು ಅಭಿಪ್ರಾಯದ ಯುಕ್ತ ಸಾಧ್ಯತೆ ಇರುವ ಮೊಕದ್ದಮೆಯಾಗಿರುವುದಿಲ್ಲ ಎಂಬುದು ನಮ್ಮ ಪರಿಗಣಿತ ಅಭಿಪ್ರಾಯವಾಗಿದೆ. ಪ್ರಶ್ನಿತ ತೀರ್ಪು ಮತ್ತು ಆದೇಶವು ವಿಪರ್ಯಯವಾದುದಾಗಿದೆ ಮತ್ತು ಕಾನೂನಿಗೆ ಅನುಸಾರವಾಗಿಲ್ಲ ಎಂದು ಹೇಳುವಂಥ ಯಾವುವೇ ಸರಿಯಾದ ಕಾರಣಗಳನ್ನು ಇದರಲ್ಲಿನ ಆಪಾದಿತ–ಅಪೀಲುದಾರರು ಸಾಬೀತುಪಡಿಸಿರುವುದಿಲ್ಲ.

ಆದ್ದರಿಂದ, ಈ ಅಪೀಲು ಗುಣಾರ್ಹತೆಗಳಿಲ್ಲದ ಅಪೀಲಾಗಿದ್ದು, ವಜಾಗೊಳ್ಳಲು ಅರ್ಹವಾಗಿದೆ ಮತ್ತು ತದನುಸಾರವಾಗಿ ಅದನ್ನು **ವಜಾಗೊಳಿಸಲಾಗಿದೆ**.